
# ಯೇಸುಕ್ರಿಸ್ತನ ಎರಡನೆ ಬರುವಿಕೆಯ ಅಧ್ಯಯನ (ಕಾಲಗಣನೆಯ ದಿನ)

## ಅಧ್ಯಯನ # 44



## ಸತ್ಯವೇದದಲ್ಲಿರುವ ಮಹಾ ಸತ್ಯೋಪದೇಶಗಳು

"ನಿನ್ನ ವಾಕ್ಯವೇ ಸತ್ಯವು" - ಯೋಹಾನನು 17:17

# ಸತ್ಯವೇದದಲ್ಲಿರುವ ಮಹಾ ಸತ್ಯೋಪದೇಶಗಳು

## ಅಧ್ಯಯನ # 44

## ಯೇಸುಕ್ರಿಸ್ತನ ಎರಡನೆ ಬರುವಿಕೆಯ ಅಧ್ಯಯನ (ಕಾಲಗಣನೆಯ ದಿನ)

<u>ದಯವಿಟ್ಟು ಗಮನಿಸಿ:</u> **ಈ ತರಗತಿಯಲ್ಲಿ ತಿಳಿಸಲಾಗಿರುವ ಎಲ್ಲಾ ವಾಕ್ಯಗಳನ್ನು ಸತ್ಯವೇದದಲ್ಲಿ ಓದುವ ಮೂಲಕ ನಿಮ್ಮ ಅಭ್ಯಾಸವನ್ನು ಮುಂದುವರಿಸಿರಿ.**

*ಇಲ್ಲಿ ಉಪಯೋಗಿಸಿರುವ ಅತ್ಯಧಿಕವಾದ ವಾಕ್ಯಭಾಗಗಳು(ಕೆ.ಜೆ.ವಿ) ಭಾಷಾಂತರದಿಂದ ತೆಗೆದುಕೊಳ್ಳಲಾಗಿದೆ.*

ಈ ದಿನ ನಾವು ನಮ್ಮ ಕರ್ತನ ಎರಡನೆಯ ಬರುವಿಕೆಯ ಕುರಿತು ಮೂರು ಭಾಗಗಳ ಅಭ್ಯಾಸದಲ್ಲಿ ಕೊನೆಯ ಭಾಗವನ್ನು ಕುರಿತು ನೋಡಲಿದ್ದೇವೆ.

ಇವತ್ತಿನ ಅಧ್ಯಾಯನದ ವಿಷಯವೇನೆಂದರೆ ಎರಡನೆಯ ಬರುವಿಕೆಯ ಕಾಲಗಣನೆಯ ದಿನಾಂಕ !!

**ಹೌದು ! ಕರ್ತನು ಯಾವಾಗ ಬರುತ್ತಾನೆ ?**

**ನಾವು ಹೇಳಲು ಸಾಧ್ಯವೆ?**

ಕರ್ತನ ಬರುವಿಕೆಯ ರೀತಿ ಮತ್ತು ಸ್ವಭಾವವನ್ನು ಅಧಿಕ ವಿವರವಾಗಿ ಮೂರು ಗ್ರೀಕ್ ಪದಗಳು – ಪರೌಸಿಯಾ / ಎಪಿಫೇನಿಯಾ ಮತ್ತು ಅಪೋಕಲುಪ್ಸಿಸ್ ಅನ್ನು ನೋಡಿದ ಮೇಲೆ ಆತನ ಪ್ರತ್ಯಕ್ಷತೆ (ಬರುವಿಕೆ) ಯು ಈ ಭೂಮಿಯಲ್ಲಿ –

ಕಣ್ಣಿಗೆ ಕಾಣದೆಯೂ ("**ಕಳ್ಳನಂತೆ**") ಮತ್ತು ........

ಪ್ರಬಲವಾಗಿ (**ಪೂರ್ಣ ಶಕ್ತಿಯುಳ್ಳವನಾಗಿ**)

ಬರುವನೆಂದು ನಮಗೆ ಮನವರಿಕೆಯಾಗಿದೆ.

ಆದ್ದರಿಂದ ಕರ್ತನು ಭೂಮಿಯಲ್ಲಿ ದೇವರ ರಾಜ್ಯವನ್ನು ಸ್ಥಾಪಿಸಿ ಆಶೀರ್ವಧಿಸುವನೆಂದು ಬಹಳ ಹಿಂದೆಯೇ ವಾಗ್ದಾನ ಮಾಡಿದ್ದನು. ಇದರಿಂದಲೇ ಕ್ರೈಸ್ತರು ಕಳೆದ 2000 ವರ್ಷಗಳಿಂದ ಹೀಗೆ ಪ್ರಾರ್ಥಿಸುತ್ತಿದ್ದಾರೆ –

**ಮತ್ತಾಯ** 6:10 - **"ನಿನ್ನ ರಾಜ್ಯವು ಬರಲಿ. ನಿನ್ನ ಚಿತ್ತವು ಪರಲೋಕದಲ್ಲಿ ನೆರವೇರುವ ಪ್ರಕಾರ ಭೂಲೋಕದಲ್ಲಿಯೂ ನೆರವೇರಲಿ".**

ಆದರೆ ಎಲ್ಲಕ್ಕಿಂತ ಮೇಲಾಗಿ ನಮ್ಮೆಲ್ಲರ ಮನಸ್ಸಿನಲ್ಲಿ ಬರುವ ಪ್ರಶ್ನೆ ಏನೆಂದರೆ –

**ಸತ್ಯವೇದವು ಈ ಮಹತ್ತಾದ ಮತ್ತು ಬಹುಕಾಲದಿಂದ ಕಾಯುತ್ತಿದ್ದ ಘಟನೆಯ ದಿನಾಂಕವನ್ನು ಕುರಿತು ಪ್ರಕಟಿಸುತ್ತದೆಯೇ ಅಥವಾ ಬೋಧಿಸುತ್ತದೆಯೇ?**



ಇದರ ಉತ್ತರಕ್ಕಾಗಿ ನಾವು ಕೆಲವು ವಾಕ್ಯಗಳನ್ನು ನಾವು ನೋಡೋಣ –

**ಯೋಬನು 24 : 1**

**"ಸರ್ವಶಕ್ತನಿಗೆ ಕಾಲಗಳು ಮರೆಯಾಗದೆ ಇರಲಾಗಿ, ಆತನನ್ನು ತಿಳಿದವರು ಆತನ ದಿವಸಗಳನ್ನು ನೋಡದೆ ಇರುವದು ಯಾಕೆ?"**

ಆಹ್ ! ಹೌದು ! ಇಲ್ಲಿ ಸ್ಪಷ್ಟವಾಗಿ ತೋರುವದೇನೆಂದರೆ ಯಾರ್‍ಯಾರು ಸರ್ವಶಕ್ತನನ್ನು **"ಅರಿತಿದ್ದಾರೋ"** ಅಂಥವರಿಗೆ **"ಆತನ ದಿನಗಳ"** ಕುರಿತು ಜ್ಞಾನವಿರಬೇಕು !!

**ಇದರೊಂದಿಗೆ ಎರಡನೆ ಬರುವಿಕೆಯ "ನೇಮಕಗೊಂಡ ಕಾಲ" ವೂ ಸಹ "ತಕ್ಕ ಕಾಲ" ದಲ್ಲಿ ತಿಳಿದಿರುತ್ತದೆ !!**

ಮತ್ತೆ ಇದನ್ನೆ ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

**ಜ್ಞಾನೋಕ್ತಿ 25 : 2**

**"ವಿಷಯವನ್ನು ರಹಸ್ಯ ಮಾಡುವದು ದೇವರ ಪ್ರಭಾವ (ಮಹಿಮೆ); ವಿಷಯವನ್ನು ವಿಮರ್ಶೆ ಮಾಡುವುದು ರಾಜರ ಪ್ರಭಾವ (ಗೌರವ)"**

## ಆಹ್ ! ಈ "ರಾಜರು" ಯಾರು?

ಹೌದು ! ಅವರು ನಂಬಿಗಸ್ತ ಕ್ರೈಸ್ತರು ಎಂದು ಕೆಳಗಿನ ವಾಕ್ಯದಲ್ಲಿ ಸೂಚಿಸಲಾಗಿದೆ.

**ಪ್ರಕಟನೆ 1 : 6 –** "ರಾಜ್ಯವನ್ನಾಗಿಯೂ (ರಾಜರನ್ನಾಗಿಯೂ) ತನ್ನ ತಂದೆಯಾದ ದೇವರಿಗೆ ಯಾಜಕರನ್ನಾಗಿಯೂ ಮಾಡಿದವನೂ..."

ಮತ್ತೆ ಅಲ್ಲಿ ➡ "ವಿಷಯವನ್ನು ವಿಮರ್ಶೆ ಮಾಡುವದು" ನಮಗೆ ಸಿಕ್ಕಿರುವ ಭಾಗ್ಯವಾಗಿದೆ ಎಂದು ನೋಡುತ್ತೇವೆ.

➡ **ಮತ್ತು ಅದರೊಂದಿಗೆ ಎರಡನೆ ಬರುವಿಕೆಯ "ನೇಮಕಗೊಂಡ ಕಾಲ" ವೂ ಸೇರಿದೆ ಎಂದು ನೋಡುತ್ತೇವೆ !!**

ಮತ್ತೆ ಇದನ್ನೆ ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

**ಯಶಾಯ 34 : 16**


"ಯಹೋವನ ಶಾಸ್ತ್ರದಲ್ಲಿ ಹುಡುಕಿ ಓದಿರಿ, ಇವುಗಳಲ್ಲಿ ಯಾವದೂ ಇಲ್ಲದಿರದು, ಎಲ್ಲವೂ ಜೊತೆಜೊತೆಯಾಗಿರುವವು; ಆತನ ಬಾಯಿಂದ ಅಪ್ಪಣೆಯಾಯಿತಲ್ಲವೇ, ಆತನ ಆತ್ಮವು ಇವುಗಳನ್ನು ಒಟ್ಟಿಗೆ ಬರಮಾಡಿತಷ್ಟೆ."

ಹೌದು ! ಇಲ್ಲಿ ನೀಡಿರುವ ಭರವಸೆ ಏನೆಂದರೆ ಪ್ರತಿಯೊಂದು ಪ್ರಶ್ನೆಗೂ ವಾಕ್ಯದಲ್ಲಿ ನಿಶ್ಚಯವಾಗಿ ಉತ್ತರವಿದೆ –

"........ಇವುಗಳಲ್ಲಿ ಯಾವದೂ ಇಲ್ಲದಿರದು, ಎಲ್ಲವೂ ಜೊತೆಜೊತೆಯಾಗಿರುವವು"

👉 ನಾವು ಏನು ಮಾಡಬೇಕು ಎಂದು ಸಹ ಸ್ಪಷ್ಟವಾಗಿ ಕೊಡಲಾಗಿದೆ –

"ಯೆಹೋವನ ಶಾಸ್ತ್ರದಲ್ಲಿ ಹುಡುಕಿ ಓದಿರಿ..."



ಹೌದು ! ಈ ಪ್ರಶ್ನೆಗೆ ಉತ್ತರವು ವಾಕ್ಯದಲ್ಲಿ ನೋಡಬಹುದು ಎಂದು ಭರವಸೆ ಇದ್ದಮೇಲೆ ಈಗ ನಾವು ದೇವರ ವಾಕ್ಯದಲ್ಲಿ ನೋಡೋಣ !

ಈ ದಿನ ನಾವು ಈ ವಿಷಯವನ್ನು ಮೂರು ದೃಷ್ಟಿಕೋನದಲ್ಲಿ ಅಭ್ಯಾಸ ಮಾಡಲಿದ್ದೇವೆ –

- **ಪ್ರವಾದನ ವಾಕ್ಯ**
- **ಧರ್ಮಶಾಸ್ತ್ರದಲ್ಲಿ ಕಾಲಗಣನೆ**
- **ಸತ್ಯವೇದ ಕಾಲಗಣನೆ**

ಮೊದಲು ನಾವು ಮೊದಲ ದೃಷ್ಟಿಕೋನದಿಂದ ಆರಂಭಿಸೋಣ –

# 1. ಪ್ರವಾದನ ವಾಕ್ಯ

ಹೌದು ! ಈ ಪ್ರಶ್ನೆಗೆ ಉತ್ತರವನ್ನು ಪ್ರವಾದನೆಯ ದೃಷ್ಟಿಕೋನದಿಂದ ಮೊದಲು ಆರಂಭಿಸೋಣ !

ಬರುವ ದೇವರ ರಾಜ್ಯವ ಕುರಿತು ಇರುವ ಪ್ರವಾದನೆಯನ್ನು ಯಾವ ಸತ್ಯವೇದದ ವಾಕ್ಯದಲ್ಲಿ ನಾವು ಅಭ್ಯಾಸ ಮಾಡುತ್ತೇವೆ?

**ನಿಮಗೆ ನೆನಪಿದೆಯೇ? ?**

**ಆಹ್ ! ಹೌದು ! ಇದು ದಾನಿಯೇಲನ ಪುಸ್ತಕದಲ್ಲಿದೆ !!**

ಅಭ್ಯಾಸ # 08 ರಲ್ಲಿ ನಾವು ಎರಡು ಕನಸುಗಳನ್ನು ಕುರಿತು ನೋಡಿದ್ದೇವೆ.

- ಒಂದು ಬಾಬೆಲಿನ ಅರಸನಾದ ನೆಬೂಕದ್ನೆಚ್ಚರನು – **“ಆ ಅದ್ಭುತ ಪ್ರತಿಮೆ”**ಯು ನಾಲ್ಕು ಲೋಹದಿಂದ ಕೂಡಿದ್ದಾಗಿತ್ತು ಎಂದು 2ನೇ ಅಧ್ಯಾಯದಲ್ಲಿ ನೋಡುತ್ತೇವೆ.
- ...... ಮತ್ತು ಇನ್ನೊಂದು ಸ್ವತ: ದಾನಿಯೇಲನು ಕಂಡ **“ನಾಲ್ಕು ಮೃಗಗಳ”** ಕನಸು ಎಂದು 7ನೇ ಅಧ್ಯಾಯದಲ್ಲಿ ನೋಡುತ್ತೇವೆ.

**ಇವುಗಳು ದೇವರ ರಾಜ್ಯವು ಹೇಗೆ ಭೂಮಿಯಲ್ಲಿ ಸ್ಥಾಪನೆಯಾಗುವದು ಎಂದು ತೋರಿಸುವ ಪ್ರವಾದನ ಚಿತ್ರಣವಾಗಿದೆ.**

ಅದು ಮಾತ್ರವಲ್ಲ ಆದರೆ ಆ ಪ್ರವಾದನ ವಾಕ್ಯವು –

**ರಾಜ್ಯವು ಯಾವಾಗ ಬರುತ್ತದೆ ಎಂದು ಸಹ ಪ್ರಕಟಿಸಿದೆ !**

**ನಿಮಗೆ ಆಶ್ಚರ್ಯವಾಗಿದೆಯಾ??**

ಈಗ ನಾವು ಕೆಳಗಿನ ವಾಕ್ಯವನ್ನು ನೋಡೋಣ –

**ದಾನಿಯೇಲನು 2 : 44**

**“ಅರಸರ ದಿವಸಗಳಲ್ಲಿ ಪರಲೋಕದ ದೇವರು ಎಂದಿಗೂ ನಾಶವಾಗದ ರಾಜ್ಯವನ್ನು ಸ್ಥಾಪಿಸುವನು....”**

**ಹೌದು ! ಅಗೋ ಅಲ್ಲಿದೆ !!**

ದೇವರ ರಾಜ್ಯವು –

**“....... ಅರಸರ ದಿವಸಗಳಲ್ಲಿ”**

**“...... ಸ್ಥಾಪಿಸುವನು”** ಎಂದು ಸ್ಪಷ್ಟವಾಗಿ ಓದುತ್ತೇವೆ.

ಈಗ ಬಹಳ ಸ್ಪಷ್ಟವಾಗಿದೆ !

ಈ **“ಅರಸರು”** ಯಾರು ಮತ್ತು ಅವರ ಆಳ್ವಿಕೆಯ ಕಾಲ ಅಥವಾ **“ದಿವಸಗಳು”** ಎಷ್ಟು ಎಂದು ಕಂಡುಹಿಡಿದರೆ ದೇವರ ರಾಜ್ಯದ **“ಸ್ಥಾಪನೆಯ”** ಕಾಲಾವಧಿಯನ್ನು ಗುರುತಿಸಬಹುದು !!

**ಯಾರು ಈ ಅರಸರು?**

ಈ **“ಅರಸರು”** ಆ **“ಪ್ರತಿಮೆ”**ಯ ಕಾಲಿನ ಹತ್ತು ಬೆರಳುಗಳನ್ನು ಸೂಚಿಸುತ್ತದೆ.



ಅದು ಆ "**ಪ್ರತಿಮೆ**"ಯ ನಾಲ್ಕನೆಯ ಲೋಹದ ಭಾಗವಾಗಿದೆ –

**"ಅದರ ಕಾಲುಗಳು ಕಬ್ಬಿಣದಿಂದಲೂ ಅದರ ಪಾದಗಳು ಅರ್ಧ ಕಬ್ಬಿಣವೂ ಮತ್ತು ಅರ್ಧ ಮಣ್ಣು ಆಗಿತ್ತು".**

ನೀವು ಅಭ್ಯಾಸ # 08 ನೆನಪಿಸಿಕೊಂಡರೆ ಈ "ಪ್ರತಿಮೆ" ಮತ್ತು ಅದರ ನಾಲ್ಕು ಲೋಹದ ಭಾಗಗಳು ಪ್ರಪಂಚದ ನಾಲ್ಕು ಅರಸಾಳ್ವಿಕೆಯನ್ನು ಸೂಚಿಸುತ್ತದೆ. ಅವು ಇಸ್ರಾಯೇಲ್ ಮತ್ತು ಇಡೀ ಲೋಕವನ್ನು ಯೆಹೂದದ

ಅರಸನಾದ ಚಿದ್ಕೀಯನ ಬೀಳುವಿಕೆಯ ನಂತರ ಆಳ್ವಿಕೆ ಮಾಡುತ್ತದೆ ಎಂದು ಸೂಚಿಸುತ್ತದೆ !

ಇವರು ಯಾರೆಂದರೆ –

**ಬಾಬೆಲ್ ಅರಸಾಳ್ವಿಕೆ**
**ಮೆದೋ ಪರ್ಶಿಯನ್ ಅರಸಾಳ್ವಿಕೆ**
**ಗ್ರೀಕ್ ಅರಸಾಳ್ವಿಕೆ**
**ರೋಮನ್ ಅರಸಾಳ್ವಿಕೆ**

ಈಗ ಕೊನೆಯ ಭಾಗವಾದ "**ಕಬ್ಬಿಣ**"ವು ರೋಮನ್ ಸಾಮ್ರಾಜ್ಯ ಮತ್ತು "**ಅರ್ಧ ಕಬ್ಬಿಣದಿಂದಲೂ ಅರ್ಧ ಮಣ್ಣಿನಿಂದಲೂ**" ಮಾಡಿದ ಆ ಪ್ರತಿಮೆಯು ವಿಗ್ರಹಾರಾಧಕ ರೋಮನ್ ಸಾಮ್ರಾಜ್ಯವು

ಪವಿತ್ರ ರೋಮನ್ ಸಾಮ್ರಾಜ್ಯವಾಗಿ ಮಾರ್ಪಡುವದನ್ನು ಸೂಚಿಸುತ್ತದೆ.

ನಮಗೆಲ್ಲರಿಗೂ ತಿಳಿದಿರುವ ಹಾಗೆ ಇದು ಚಕ್ರಾಧಿಪತಿಯಾದ ಚಾರ್ಲೆಮ್ಯಾಗ್ನೆಯ ಅಡಿಯಲ್ಲಿ ಕ್ರಿ.ಶ. 799 ರಲ್ಲಿ ಆರಂಭವಾಯಿತು !

ಈ "**ಪ್ರತಿಮೆಯ**" "**ಹತ್ತು ಬೆರಳುಗಳು**" ನೆಪೋಲಿಯನ್ ಬೊನೊಪಾರ್ಟೆಯ ಮೂಲಕ ಪೋಪ್‌ರವರು ಖೈದಿಯಾದ ಕ್ರಿ.ಶ. 1799 ನಂತರ ಅಂದರೆ "**ಪವಿತ್ರ ರೋಮನ್ ಸಾಮ್ರಾಜ್ಯ**" ಮುಗಿದ ನಂತರ ಎಂದು ಸೂಚಿಸುತ್ತದೆ.

ಹೌದು ! ಕ್ರಿ.ಶ. 1799 ನಂತರವೇ ಈ "**ಹತ್ತು ಬೆರಳುಗಳು**" ಬೆಳವಣಿಗೆಯಾದವು !

ಹೇಗೆ ಕಾಲುಗಳ "**ಬೆರಳುಗಳು**" "**ವ್ಯತ್ಯಾಸವುಳ್ಳ**" ಮತ್ತು "**ಬೇರೆ ಬೇರೆ**"ಯಾಗಿದೆಯೋ ಅದೇ ರೀತಿ ಈ "**ಹತ್ತು ಬೆರಳುಗಳು**" ವಿವಿಧ ಮತ್ತು ಬೇರೆ ಬೇರೆ ರಾಜ್ಯಗಳು ಬೆಳವಣಿಗೆ ಯಾದದನ್ನು ಸೂಚಿಸುತ್ತದೆ.

ಇವು ಯೂರೋಪಿನ ವಿವಿಧ ದೇಶಗಳಲ್ಲಿ ಬೆಳವಣಿಗೆ ಹೊಂದಿದವು !

ಯೂರೋಪಿನ "ಕ್ರೈಸ್ತ ದೇಶದ"ವರೆಂದು ಕರೆಸಿಕೊಳ್ಳಲ್ಪಡುವ ಇವರು ಕ್ರಿಸ್ತನ ರಾಜ್ಯದ ಒಂದು ಭಾಗದವರು ಎಂದು ಹಕ್ಕು ಸಾಧಿಸುತ್ತಾರೆ !

ಆದ್ದರಿಂದ ಅವರು ತಮ್ಮನ್ನು ತಾವೇ ಕ್ರೈಸ್ತಸಮಾಜದವರು **(Christendom)** ಎಂದು ಕರೆದುಕೊಳ್ಳುತ್ತಾರೆ !!

ಇವರು ಯಾರೆಂದರೆ –

- **ಬ್ರಿಟಿಷ್ ಸಾಮ್ರಾಜ್ಯದವರು**
- **ಫ್ರೆಂಚ್ ಸಾಮ್ರಾಜ್ಯದವರು**
- **ಡಚ್ ಸಾಮ್ರಾಜ್ಯದವರು**
- **ಪೋರ್ಚುಗೀಸ್ ಸಾಮ್ರಾಜ್ಯದವರು**
- **ಸ್ಪ್ಯಾನಿಷ್ ಸಾಮ್ರಾಜ್ಯದವರು**
- **ಜರ್ಮನ್ ಸಾಮ್ರಾಜ್ಯದವರು ಇತರೆ.**

ಇವರೆಲ್ಲರೂ ಸೇರಿ ಅಮೇರಿಕಾದಿಂದ ಏಷ್ಯಾದವರೆಗೆ ಇಡೀ ಪ್ರಪಂಚವನ್ನು ವಾಸಾಹತುವನ್ನಾಗಿ ಮಾಡಿಕೊಂಡಿದ್ದಾರೆ **(Colonised) !**

**ಪ್ರವಾದನೆಯಲ್ಲಿ ಇವರನ್ನು ಅರಸರು ಎಂದು ಸೂಚಿಸಲಾಗಿದೆ !**

ಈಗ ಈ ಅರಸರ "**ಕಾಲಾವಧಿ**" ಅಥವಾ "**ದಿವಸಗಳು**" ಎಷ್ಟು?

ನಮಗೆ ಗೊತ್ತಿರುವ ಹಾಗೆ ಆ "**ದೊಡ್ಡ ಪ್ರತಿಮೆ**" ಯ ಕೊನೆಯ ಭಾಗವು "**ಹತ್ತು ಬೆರಳುಗಳಾಗಿವೆ**". ಇದು ಲೋಕವನ್ನಾಳುವ ನಾಲ್ಕು ಪ್ರಪಂಚದ ಅರಸಾಳ್ವಿಕೆಯನ್ನು ಸೂಚಿಸುತ್ತದೆ.

ಈಗ ಇದೇ "**ಪ್ರತಿಮೆ**"ಯನ್ನು ಇನ್ನೊಂದು ರೀತಿಯಲ್ಲಿ ಯೇಸು ಹೇಳಿರುವುದನ್ನು ಕುರಿತು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

## ಲೂಕ 21 : 24

"ಇದಲ್ಲದೆ ಅವರು ಕತ್ತಿಯ ಬಾಯಿಗೆ ಬೀಳುವರು. ಸೆರೆಯಾಗಿ ಎಲ್ಲಾ ಜನಾಂಗಗಳಲ್ಲಿ ಒಯ್ಯಲ್ಪಡುವರು; ಅನ್ಯಜನಗಳ ಕಾಲಗಳು ಪರಿಪೂರ್ಣವಾಗುವವರೆಗೆ ಯೆರೂಸಲೇಮು ಅನ್ಯ ಜನಗಳಿಂದ ತುಳಿದಾಡಲ್ಪಡುವುದು".

ಆಹ್ ! ಹೌದು ! ಇದನ್ನೆ ಕರ್ತನು

"ಅನ್ಯ ಜನಗಳ ಕಾಲಗಳು" ಎಂದು ಸೂಚಿಸಿದ್ದಾನೆ.



ಮತ್ತು ಆತನು ಇಲ್ಲಿ ಹೇಳುವದೇನೆಂದರೆ "**ಯೆರುಸಲೇಮು**" ಈ ಕಾಲಾವಧಿಯಲ್ಲಿ "**ತುಳಿದಾಡಲ್ಪಡುವದು**".

**ಇದರ ಅರ್ಥ ಏನು?**

ಇಲ್ಲಿ "**ಯೆರುಸಲೇಮು**" ಎಂದರೆ ನೇರವಾದ ಯೆರುಸಲೇಮ್ ಪಟ್ಟನವನ್ನು ಸೂಚಿಸುತ್ತಿಲ್ಲ ಆದರೆ ಇಡೀ ಇಸ್ರಾಯೇಲ್ ದೇಶವನ್ನು ಸೂಚಿಸುತ್ತದೆ !

"**ಯೆರುಸಲೇಮು**" ಎಂಬುದು ಸತ್ಯವೇದದಲ್ಲಿ ಇಸ್ರಾಯೇಲಿಗೆ ಸೂಚಿಸಲಾಗಿದೆ ಎಂದು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –


**ಮತ್ತಾಯ 23 : 37**

"ಓ ಯೆರೂಸಲೇಮೇ, ಯೆರುಸಲೇಮೇ,......."

ಮತ್ತು "ತುಳಿದಾಡಲ್ಪಡುವದು" ಎಂದರೆ "ಆಳ್ವಿಕೆ ಮಾಡಲ್ಪಡುವದನ್ನು" ಸೂಚಿಸುತ್ತದೆ !

**ಆದ್ದರಿಂದ ಇದು ಇಡೀ ಇಸ್ರಾಯೇಲ್ ದೇಶದವರು "ಅನ್ಯಜನಗಳ" ಆಳ್ವಿಕೆಯ ಅಡಿಯಲ್ಲಿ ಇರುವ ಕಾಲಾವಧಿಯನ್ನು ಸೂಚಿಸುತ್ತದೆ.**

ಹೌದು ! ಈ "ಅನ್ಯಜನಗಳಕಾಲ" ಎಂಬುದು ಪ್ರಪಂಚದ ನಾಲ್ಕು ಅರಸಾಳ್ವಿಕೆಯ ಕಾಲಾವಧಿಯ ಇನ್ನೊಂದು ಹೆಸರಾಗಿದೆ !!



ಮತ್ತು ನಮಗೆ ಇನ್ನೂ ಗೊತ್ತಿರುವದೇನೆಂದರೆ ಈ “ಅನ್ಯಜನಗಳ ಕಾಲವು” ಅರಸನಾದ ಚಿದ್ದೀಯನ ಬೀಳುವಿಕೆ ಕಾಲವಾದ ಕ್ರಿ.ಪೂ. 606 ರಲ್ಲಿ ಬಾಬೆಲಿನ ಆಳ್ವಿಕೆಯಲ್ಲಿ ಆರಂಭವಾಯಿತು.

ಈಗ ಈ “ಅನ್ಯಜನಗಳ ಕಾಲ”ವು ಇಸ್ರಾಯೇಲ್ಯರ ಅವಿಧೇಯತೆಗಾಗಿ ದೇವರು ನೀಡಿದ ಕೊನೆಯ ಶಿಕ್ಷೆಯಾಗಿದೆ.

ಈ ಶಿಕ್ಷೆಯು ಕಾಲಪ್ರವಾದನೆಯ ಪ್ರಕಾರ **“ಏಳರಷ್ಟಾಗಿದೆ”** ಎಂದು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

**ಯಾಜಕಕಾಂಡ** 26 : 28 – **“ನಾನು ನಿಮಗೆ ವಿರೋಧವಾಗಿ ಕೋಪದಿಂದ ನಡೆಯುವವನಾಗಿ ನಿಮ್ಮ ಪಾಪಗಳ ನಿಮಿತ್ತ ಏಳರಷ್ಟಾಗಿ ಶಿಕ್ಷಿಸುವನು”.**

**(ಈ ವಿಷಯವನ್ನು ಕುರಿತು ವಿವರವಾಗಿ ನಾವು ಅಭ್ಯಾಸ** # 28 – **ಕಾಲಗಳ ಪ್ರವಾದನೆಗೆ ಬೀಗದ ಕೈಗಳು – ರಲ್ಲಿ ನೋಡಿದ್ದೇವೆ).**

ನಾವು ನೋಡಿದ್ದೇವೆಂದರೆ ಈ ಪ್ರವಾದನ ಕಾಲವಾದ “**ಏಳರಷ್ಟು**” ಎಂದರೆ ಏಳು “**ಪ್ರವಾದನ ವರ್ಷ**”ಗಳ ಕಾಲವಾಗಿದ್ದು “**ಕಾಲ**” ಎಂದರೆ “**ಪ್ರವಾದನಾ ವರುಷ**” ಎಚಿದರ್ಥ.

**(ಪ್ರಕಟನೆ** 12**ನೇ ಅಧ್ಯಾಯನ ಮತ್ತು ದಾನಿಯೇಲನು** 7 : 25 **ನೋಡಿರಿ).**

ಒಂದು “**ಪ್ರವಾದನ ವರುಷ**”ವು – 360 “**ಪ್ರವಾದನ ದಿವಸಗಳಾಗಿವೆ**” ಎಂದು ನಾವು ನೋಡಿದ್ದೇವೆ.

ಆದ್ದರಿಂದ ಈ **“ಏಳರಷ್ಟು”** ಕಾಲಾವಧಿಯೆಂದರೆ –

| 7 | X | 360 | = | 2520 |
|---|---|---|---|---|
| **"ಕಾಲಗಳು" ಅಥವಾ ಪ್ರವಾದನಾ ವರ್ಷಗಳು** | | **“ಪ್ರವಾದನಾ ವರ್ಷ"ದಲ್ಲಿರುವ "ಪ್ರವಾದನಾ ದಿನಗಳು"** | | **"ಪ್ರವಾದನಾ ದಿನಗಳು”** |

ನಂತರ ಪ್ರವಾದನ ಕಾಲ ಲೆಕ್ಕಾಚಾರಕ್ಕೆ ಒಂದು ನಿಯಮವಿದೆ ಎಂದು ನೋಡಿದೆವು. ಇದನ್ನು ಕುರಿತು ಹೀಗೆ ಓದುತ್ತೇವೆ –

**ಯೆಹೆಜ್ಕೇಲನು** 4 : 6 - "ವರುಷ ಒಂದಕ್ಕೆ ಒಂದು ದಿನದ ಮೇರೆಗೆ ......"

(ಇದೇ ವಿಷಯವನ್ನು ಅರಣ್ಯಕಾಂಡ 4:34 ರಲ್ಲಿ ನೋಡಬಹುದು)

ಆದ್ದರಿಂದ ಈ ಪ್ರವಾದನ ಕಾಲಾವಧಿಯ 2520 "**ದಿವಸಗಳು**" ನಿಜವಾದ ಕಾಲವಾದ –

**2520 "ಪ್ರವಾದನ ದಿನಗಳು" = 2520 ನಿಜವಾದ ವರುಷಗಳು (ನೇರವಾದ)**

ಈ 2520 ವರ್ಷದ ಕಾಲವು ಕ್ರಿ.ಪೂ. 606 ರಲ್ಲಿ ಆರಂಭವಾಗಿ ಮುಂದುವರೆದು, 2520 ವರ್ಷಗಳ ನಂತರ ಕೊನೆಗೊಳ್ಳುತ್ತದೆ !

ಮತ್ತು "**ಪ್ರವಾದನ ವಾಕ್ಯಗಳ**" ಪ್ರಕಾರ ದೇವರ ರಾಜ್ಯದ ಸ್ಥಾಪನೆ ಅಥವಾ ಅದರ ಆರಂಭವು "**ಅರಸರ ಈ ದಿನಗಳಲ್ಲಿ**" ಆಗುವುದು.

ಇಲ್ಲಿ ಸ್ಪಷ್ಟವಾಗಿ ಗುರುತಿಸಬಹುದಾದ ವಿಷಯವೇನೆಂದರೆ ಭೂಮಿಯಲ್ಲಿ ದೇವರ ರಾಜ್ಯವು "ಸ್ಥಾಪನೆಯಾಗಲು" ಅಥವಾ ಆರಂಭವಾಗಲು ಈ 2520 ವರ್ಷದ ಕಾಲದೊಳಗೆ ಮತ್ತು ಮುಗಿದುಹೋಗುವ ಮೊದಲು ಆರಂಭವಾಗುತ್ತದೆ !!


ಇದು ಬಹಳ ಸ್ಪಷ್ಟವಾಗಿದೆಯಲ್ಲವೆ !

**ಇದನ್ನೇ ಅಲ್ಲವೆ ಪ್ರವಾದನ ವಾಕ್ಯವು ನಮಗೆ ಸ್ಪಷ್ಟವಾಗಿ ತಿಳಿಸುತ್ತಿರುವದು**?

ಹೌದು ! ಅನ್ಯಜನಗಳ "**ಕಾಲ**"ಗಳ ಸುಲಭವಾದ ಲೆಕ್ಕಾಚಾರವನ್ನು ಮಾಡುವಾಗ "**ಈ ಅರಸುಗಳ**" ಆಳ್ವಿಕೆಯ ಕಾಲದ ಮುಕ್ತಾಯವು ಯಾವಾಗ ಎಂದು ಪ್ರಕಟವಾಗುತ್ತದೆ.

| | | | | |
|---|---|---|---|---|
| **2520** | - | **606** | = | **1914** |
| | | **( ಕ್ರಿ.ಪೂ. ಕಾಲ ಆರಂಭ )** | | **(ಕ್ರಿ.ಪೂ. ಕಾಲ ಮುಕ್ತಾಯ)** |

## ಅನ್ಯ ಜನಗಳ ಕಾಲ




ಮತ್ತು ಇದೇ ಕ್ರಿ.ಶ.1914 ವರ್ಷದಲ್ಲಿ ಯೂರೋಪಿನಲ್ಲಿ ಮೊದಲನೆಯ ಮಹಾ ಯುದ್ಧವು ಆರಂಭವಾಯಿತು **(First World War)** ಮತ್ತು "ಈ ಅರಸರ ಆಳ್ವಿಕೆ ಮತ್ತು ಚಕ್ರಾಧಿಪತ್ಯವು **(Monarchy)** ಏಕಾಏಕಿಯಾಗಿ ಮುಗಿದು ಹೋಗುತ್ತದೆ !!


**ಮತ್ತು... "ಹತ್ತು ಕಾಲು ಬೆರಳು"ಗಳ ನಡುವೆ,(ಯೂರೋಪ್ ದೇಶಗಳು) ಯುದ್ಧವಾಯಿತು ಮತ್ತು ಇದು ಕ್ರಿ.ಶ. 1914 ಕ್ಕೆ ಮುಂಚೆ ಆರಂಭವಾಗುತ್ತದೆ ಎಂದು ಗುರುತಿಸುತ್ತೇವೆ !!**

ನಿಜವಾಗಿಯೂ 1914 ರ ಬಹಳ ವರ್ಷಗಳ ನಂತರ ಬದುಕುತ್ತಿರುವ ನಾವು, "ಮನುಷ್ಯ ಕುಮಾರನ ದಿನಗಳಲ್ಲಿ" ಮತ್ತು ದೇವರ ರಾಜ್ಯದಲ್ಲಿ ಇರುವದರಿಂದ

ಆಶೀರ್ವದಿಸಲ್ಪಟ್ಟವರಾಗಿದ್ದೇವೆ !

**ಇದನ್ನು ನಂಬಲು ಸಾಧ್ಯವಾಗುತ್ತಿಲ್ಲವೆ?**

**1914 ರ ನಂತರ ಉಂಟಾಗಿರುವ ಬದಲಾವಣೆಗಳು ಮತ್ತು ಸೂಚನೆಗಳನ್ನು ನೋಡಿರಿ !!**



ನೋಹನ ಮುಖಾಂತರ
ಕಾನಾನನ ವಂಶಸ್ತರಿಗೆ
ಉಂಟಾದ

ದಾಸತ್ವದ ಶಾಪವು (ಆದಿಕಾಂಡ 9:25) 1874ನೇ
ವರ್ಷದಲ್ಲಿ ಆಫ್ರಿಕಾದಲ್ಲಿ ಡೇವಿಡ್ ಲಿವಿಂಗ್
ಸ್ಟೋನ್‌ನ ಪ್ರಯಾಸದಿಂದ ನೀಗ್ರೋದವರು
ದಾಸತ್ವದಿಂದ ಮುಕ್ತರಾದರು !

(... ಮತ್ತು ಅಮೆರಿಕದ ಅಧ್ಯಕ್ಷನಾಗಿದ್ದ ಅಬ್ರಾಹಂ
ಲಿಂಕನ್ ಅವರ ಪ್ರೋತ್ಸಾಹದಿಂದ ಮತ್ತು
ಬೆಂಬಲದಿಂದ ಉಂಟಾಯಿತು)

➡ ವೈಜ್ಞಾನಿಕ ಸಂಶೋಧನೆಗಳು ಮತ್ತು
ತಂತ್ರಜ್ಞಾನಗಳು ಹೆಚ್ಚಾದ ನಂತರ ಇದಕ್ಕೆ
ಮೊದಲು ಇದ್ದಂತಹ ಸ್ಥಿತಿಯ ಸಾವಿರ
ಪಟ್ಟಿಗಿಂತಲೂ ಹೆಚ್ಚಾದವು !!

ಆದ್ದರಿಂದ ಇದು ಕೆಳಗಿನ ವಾಕ್ಯವು ನೆರವೇರುತ್ತದೆ –

**ದಾನೀಯೇಲನು 12 : 4**

**"ಬಹು ಜನರು ಅತ್ತಿತ್ತ ತಿರುಗುವರು, ತಿಳುವಳಿಕೆಯು ಹೆಚ್ಚುವದು"**

ಹೌದು ! ಆ ಕಾಲವಾದ ನಂತರ ಎಲ್ಲಾ ವಿಷಯಗಳಲ್ಲಿ ಜ್ಞಾನವು
**"ಹೆಚ್ಚಾಗಿದೆ"** !



ಮೇಲಿನ ವಾಕ್ಯದ
ಎರಡನೆಯ ಭಾಗ –

## “ಬಹು ಜನರು ಅತ್ತಿತ್ತ ತಿರುಗುವರು......”

ಇದು ರವಾನಿಸುವುದನ್ನು ಅಥವಾ ಸಾಗಿಸುವದನ್ನು ಸೂಚಿಸುತ್ತದೆ.




ನಿಜವಾಗಿಯೂ ಆ ಕಾಲದಿಂದ ಸಾಗಿಸುವ ವಿಧಾನವೆ ಬಹಳವಾಗಿ ಬೆಳೆದಿದೆ. ಮತ್ತು ಬಹುಶ: ಲೋಕದ ಎಲ್ಲಾ ದೇಶಕ್ಕೂ ಅಂದಿನಿಂದ ಹರಡಿದೆ !!

ಈಗಿನ ವಿವಿಧ ಸಾಗಣೆಗಳನ್ನು ನೋಡಿರಿ, ಆಗ ಈ ವಿಷಯವು ನಮಗೆ ಚೆನ್ನಾಗಿ ಅರ್ಥವಾಗುತ್ತದೆ ...............

### ರಸ್ತೆಗಳು

ಎಲ್ಲಾ ವಿಧವಾದ ವಾಹನಗಳು – ಎರಡು ಚಕ್ರಗಳಿಂದ – ಮೂರು ಚಕ್ರಗಳಿಂದ – ನಾಲ್ಕು ಚಕ್ರಗಳಿಂದ ............ ಹದಿನಾರು ಮತ್ತು ಇಪ್ಪತ್ತು ಚಕ್ರಗಳವರೆಗೆ !!

ಹೌದು ! ವಾಹನಗಳು (ಕಾರುಗಳು) ಬಹಳ ಶ್ರೇಣಿಯ ಆಯ್ಕೆಗಳು ಮತ್ತು ವಿನ್ಯಾಸಗಳಿಂದ ಬಂದಿದೆ.

ಬಸ್ಸುಗಳು ಪ್ರಯಾಣದ ಖರ್ಚು ಕಡಿಮೆಯಾಗಿದ್ದು ಅನೇಕ ಜನರು ಬೇರೆ ಬೇರೆ ಸ್ಥಳಗಳಿಗೆ ಪ್ರಯಾಣ ಮಾಡಲು ಅನುಕೂಲವಾಗಿದೆ. ಬಹುಶ: ಎಲ್ಲಾ ವಸ್ತುಗಳು ಮತ್ತು ಎಲ್ಲಾ ಸ್ಥಳಗಳಿಗೆ ಬಹು

ದಿನದವರೆಗೆ ಸಾಗಿಸುವದರಿಂದ ಅವಶ್ಯಕತೆ ಮತ್ತು ಪೂರೈಕೆಗಳು ಸುಲಭವಾಗಿದೆ.

**ಇವೆಲ್ಲವೂ ಕೇವಲ 100 ವರ್ಷಗಳಿಗೆ ಸ್ವಲ್ಪ ಹೆಚ್ಚು ಸಮಯದಲ್ಲಿ ಸಾಧ್ಯವಾಗಿದೆ !!**

## ರೈಲು

ರೈಲುಗಳ ಬಹಳ ಸಾಮಾನ್ಯ ಮತ್ತು ಆರಾಮದಾಯಕವಾಗಿದೆ ಮತ್ತು ಬಹಳ ದೂರದ ನೆರೆಗೂ ಪ್ರಯಾಣ ಮಾಡುವ ಸಾಧನವಾಗಿದೆ.



ಇಂಜಿನ್ ಮತ್ತು ಕೋಚ್‌ಗಳ ಗುಣಮಟ್ಟ ಬಹು ವೇಗವಾಗಿ ಬದಲಾಗಿವೆ –

- ಸ್ಟೀಮ್‌ನಿಂದ ಡೀಸೆಲ್‌ನಿಂದ ವಿದ್ಯುಚ್ಛಕ್ತಿ ಮತ್ತು ಈಗ ಮ್ಯಾಗ್ನಟಿಕ್ ಎನರ್ಜಿ !!

**ಇವೆಲ್ಲವೂ ಕಳೆದ 100 ವರ್ಷಕ್ಕಿಂತ ಸ್ವಲ್ಪ ಹೆಚ್ಚು ಸಮಯದಲ್ಲಿ ನಡೆದಿದೆ !!**

## ವಾಯು (ಆಕಾಶ)

ಇದು "**ಆಶ್ಚರ್ಯಕರ**"ವಾದ ಸಾಗಣೆಯಾಗಿದ್ದು, ಅತಿ ಕಡಿಮೆ ಸಮಯದಲ್ಲಿ ಬಹಳ ದೂರ ಪ್ರಯಾಣಿಸಬಹುದಾಗಿದೆ !!




ಏರೋಪ್ಲೇನ್‌ಗಳಲ್ಲಿ ವಿವಿಧ ಗಾತ್ರ ಮತ್ತು ಸಾಮರ್ಥ್ಯವುಳ್ಳದ್ದಾಗಿದ್ದು ಕೆಲವೇ ವರ್ಷಗಳಲ್ಲಿ ಅತಿ ಹೆಚ್ಚಾಗಿ ವಿಕಸನಗೊಂಡಿದೆ !

ರಾಕೆಟ್‌ಗಳನ್ನು ಸಹ ಮನುಷ್ಯನ ಕಂಡುಹಿಡಿದು ಭೂಮಿಯ ವಾಯು ಮಂಡಲದಿಂದ ಹೊರಹೋಗಿ ಚಂದ್ರನನ್ನು ಮೆಟ್ಟಿದ್ದಾನೆ !!

**ಇವೆಲ್ಲವೂ 100 ವರ್ಷಗಳಿಗಿಂತ ಕಡಿಮೆ ಸಮಯದಲ್ಲಿ ನಡೆದಿದೆ !**

## ಸಮುದ್ರ

ಸಾಂಪ್ರದಾಯಕವಾದ ಈ ವಿಧಾನದ ಸಾಗಣೆಯಿಂದ ದೂರ ಪ್ರಯಾನ ಮಾಡುವವರು ಮಾತ್ರವಲ್ಲದೆ ಇದು ಚಿಮ್ಮಿ ಮತ್ತು ಗಡಿದಾಟಿ ಬಂದಿದೆ !

ಅತಿ ದೊಡ್ಡ ಹಡಗುಗಳು ವಿವಿಧ ವಿನ್ಯಾಸ ಮತ್ತು ಸಾಮರ್ಥ್ಯವುಳ್ಳದಾಗಿ ನಿರ್ಮಿಸಲಾಗಿದೆ !

ಇಚಿಜಿನ್ ಮತ್ತು ಇಂಧನಗಳ ಉಪಯೋಗದಿಂದ ಇದರ ವೇಗವು ಬಹಳವಾಗಿ ಅಧಿಕವಾಗಿದೆ.

**ಇವೆಲ್ಲವೂ ಕೇವಲ ಕಳೆದ 100 ವರ್ಷಕ್ಕಿಂತ ಸ್ವಲ್ಪ ಹೆಚು ಸಮಯುದಲ್ಲಿ ನಡೆದಿದೆ !**




**ನಿಜವಾಗಿಯೂ ಈ ದಿನಗಳಲ್ಲಿ.....**

**"ಬಹು ಜನರು"** (ಎಲ್ಲಾ ದೇಶಗಳ ಎಲ್ಲಾ ಜನರು)

**ಓಡುತ್ತಾ "ಅತ್ತಿತ್ತ ತಿರುಗುವರು" !!!**

ನಂತರ ಸತ್ಯವು ಅತ್ಯಧಿಕವಾಗಿ ಹೆಚ್ಚಾಗಿ ಮುಂದೆಂದಿಗಿಂತಲೂ ವಿವರವಾಗಿ ಮತ್ತು ಆಳವಾಗಿ ಬೆಳೆದಿದೆ.

ಇದಲ್ಲದೆ ಸತ್ಯವನ್ನು ಸ್ವಾತಂತ್ರ್ಯವಾಗಿ ಕಳಿತು ಪ್ರಚಾರ ಮಾಡಬಹುದಾಗಿದೆ.



ಇದು ಕರ್ತನ ಪ್ರತ್ಯಕ್ಷತೆಗೆ ಇನ್ನೊಂದು ಬಲವಾದ ಸಾಕ್ಷಿಯಾಗಿದೆ –

**ಪ್ರಕಟನೆ 3 : 20**

**"ನಾನು ಒಳಗೆ ಬಂದು ಅವನ ಸಂಗಡ ಊಟ ಮಾಡುವೆನು, ಅವನು ನನ್ನ ಸಂಗಡ ಊಟ ಮಾಡುವನು".**

ಹೌದು ! ಮತ್ತೆ ಇದೇ ವಾಗ್ದಾನವನ್ನು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

**ಲೂಕ 12 : 37**

**"ಒಡೆಯನು ಬಂದಾಗ ಯಾರು ಎಚ್ಚರವಾಗಿರುವುದನ್ನು ಅವನು ಕಾಣುವನೋ ಆ ಸೇವಕರು ಧನ್ಯರು; ನಾನು ನಿಮಗೆ ನಿಜವಾಗಿ ಹೇಳುತ್ತೇನೆ, ಅವನು ಬಂದು ನಡುಕಟ್ಟಿಕೊಂಡು ಅವರನ್ನು ಊಟಕ್ಕೆ ಕೂಡ್ರಿಸಿ ಅವರಿಗೆ ತಾನೇ ಉಪಚರಿಸುವನು".**

ಹೌದು ! ಸ್ವತ: ಕರ್ತನು ತಾನೆ ಆ ಮಹಾ ಸತ್ಯಗಳನ್ನು ಕೊಡುತ್ತಾನಲ್ಲವೆ !

ಹೌದು ! ಆತನೇ ಬಂದು –

"............. ಅವರಿಗೆ ತಾನೇ ಉಪಚರಿಸುವನು".

**ಹೌದು ! ಇಂತಹ ಮಹಾ ಸತ್ಯಗಳು ಮತ್ತು ಸತ್ಯವೇದ – ದೇವರ ವಾಕ್ಯಗಳನ್ನು ಪಡೆದು ಸ್ಪಷ್ಟವಾಗಿ ಅರ್ಥಮಾಡಿಕೊಳ್ಳಲು ಯಜಮಾನನು ಪ್ರತ್ಯಕ್ಷನಾಗಿರಬೇಕು.**

ನಂತರ ಮತ್ತಾಯ 24ನೇ ಅಧ್ಯಯನದಲ್ಲಿ ತಿಳಿಸಿರುವ ಸೂಚನೆಗಳು ನೆರವೇರುತ್ತಿದೆ –

**ವಾಕ್ಯ** – 5 – "ಯಾಕೆಂದರೆ ನನ್ನ ಹೆಸರಿನಲ್ಲಿ ಅನೇಕರು ಬಂದು ನಾನು ಕ್ರಿಸ್ತನು ಎಂದು ಹೇಳಿ ಅನೇಕರನ್ನು ಮೋಸಗೊಳಿಸುವರು...."

ಈ ಕೆಳಗಿನ ವಾಕ್ಯದ ಅರ್ಥವೇನು –

"ನನ್ನ ಹೆಸರಿನಲ್ಲಿ ಅನೇಕರು ಬಂದು - ನಾನು ಕ್ರಿಸ್ತನು ಎಂದು ಹೇಳಿ..."

**ಯಾರಾದರು ನಿಜವಾಗಿ (ನೇರವಾಗಿ) ಬಂದು ನಾನು ಯೇಸು ಕ್ರಿಸ್ತನು ಎಂದು ಹೇಳುವರೆ?**

**ನಿಶ್ಚಯವಾಗಿಯೂ ಇಲ್ಲ !**

**ಹಾಗಾದರೆ ಇದರ ಅರ್ಥವೇನು ?**

ಇಲ್ಲಿ "**ನಾನು ಕ್ರಿಸ್ತನು**" ಎಂದು ಹೇಳಿಕೊಳ್ಳುವನು ಅಂದರೆ ಕ್ರಿಸ್ತನ ಶರೀರ – ಸಭೆ ಎಂದು ಸೂಚಿಸುತ್ತಿದೆ !

ನಿಜವಾಗಿಯೂ, 1914 ನಂತರ ಅನೇಕ ಸಭೆಗಳು ಅಸ್ತಿತ್ವಗೊಂಡಿದೆ !

ಆದ್ದರಿಂದ, 1914 ನಂತರ ವಿವಿಧ ಸಭೆಗಳು ಮತ್ತು ಪಂಗಡಗಳು ತಾವು ಕ್ರೈಸ್ತರೆಂದು ಹೇಳಿಕೊಳ್ಳುವದು ಬಹಳ ಹೆಚ್ಚಾಗಿದೆ.



ಅಂಕಿಅಂಶಗಳ ಅಧ್ಯಯನ ಮಾಡುವಾಗ 1914 ನಂತರ ಇರುವ ಸಭೆಯ ಸಂಖ್ಯೆ ಎಷ್ಟಿದೆ ಎಂದು ಬಹಳ ಸ್ಪಷ್ಟವಾಗಿ ತಿಳಿಯುತ್ತದೆ !!

**ವಾಕ್ಯ – 6 – "…. ಯುದ್ಧಗಳನ್ನೂ ಯುದ್ಧಗಳ ಸುದ್ದಿಗಳನ್ನೂ ನೀವು ಕೇಳುವಿರಿ."**



ಇದು 1914 ನಂತರ ಯುದ್ಧಗಳು ಮತ್ತು ಕಳವಳ (ಸುದ್ದಿಗಳು) ದೇಶಗಳ ನಡುವೆ ಹೆಚ್ಚಾಗುವದನ್ನು ಸೂಚಿಸುತ್ತದೆ ಮತ್ತು 1939 ರ ಎರಡನೆಯ ಮಹಾ ಯುದ್ಧ ಮತ್ತು ಲೋಕದ ಎಲ್ಲಾ ಸ್ಥಳಗಳಲ್ಲಿ ಉಂಟಾಗುವ ಯುದ್ಧಗಳನ್ನು ಸೂಚಿಸುತ್ತದೆ.

**ವಾಕ್ಯ – 7 – "ಯಾಕೆಂದರೆ ಜನಾಂಗಕ್ಕೆ ವಿರೋಧವಾಗಿ ಜನಾಂಗವೂ ….. ಅಲ್ಲಲ್ಲಿ ಬರಗಳು ……. ಮತ್ತು ಭೂಕಂಪಗಳು ಆಗುವವು……."**

ಹೌದು ! ಇದು ಸ್ವಾತಂತ್ರ್ಯ ಹೋರಾಟಗಳು ಮತ್ತು ಕ್ರಾಂತಿಗಳು ತಮ್ಮ ದೇಶದೊಳಗೆ ಮತ್ತು ಇತರ ರಾಜ್ಯಗಳ ವಿರುದ್ಧ ಹೋರಾಡುವದನ್ನು ಸೂಚಿಸುತ್ತದೆ ಎಂದು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

## ಲೂಕ 21 : 29, 30

**"ಆತನು ಅವರಿಗೆ ಒಂದು ಸಾಮ್ಯಕೊಟ್ಟು ಹೇಳಿದ್ದೇ ನಂದರೆ--ಅಂಜೂರದ ಮರವನ್ನು ಮತ್ತು ಎಲ್ಲಾ ಮರಗಳನ್ನು ನೋಡಿರಿ; ಅವು ಚಿಗುರಿದಾಗ ನೀವು ನೋಡಿ ಬೇಸಿಗೆಯು ಹತ್ತಿರವಾಯಿತೆಂದು ನೀವೇ ನೀವಾಗಿ ತಿಳಿದುಕೊಳ್ಳುವಿರಿ."**



ಹೌದು ! ಇಲ್ಲಿ **"ಅಂಜೂರದ ಮರ"**ವು ಇಸ್ರಾಯೇಲ್ ದೇಶಕ್ಕೆ ಸಾಂಕೇತಿಕವಾಗಿದೆ ಮತ್ತು **"ಮರಗಳು"** ಎಂದರೆ ಬೇರೆ ದೇಶಗಳೂ ಸಹ ತಮ್ಮ ರಾಷ್ಟ್ರತ್ವವನ್ನು ಹೊಂದಿ ಅದೇ ಸಮಯದಲ್ಲಿ ಸ್ವಾತಂತ್ರ್ಯವನ್ನು ಹೊಂದಿರುತ್ತದೆ !!

ಹೌದು ! **"ಅಂಜೂರದ ಮರ"** – ಇಸ್ರಾಯೇಲ್ ದೇಶವು ಸುಮಾರು 1900 ವರ್ಷಗಳ ನಂತರ ಮತ್ತೆ 1948 ರಲ್ಲಿ ಒಂದು ದೇಶವಾಗಿದೆ.

ನಂತರ ಅದೇ ವಾಕ್ಯದಲ್ಲಿ – ಮತ್ತಾಯ 24:7, ಇನ್ನೊಂದು ಸಂಕೇತವನ್ನು ಕುರಿತು ಓದುತ್ತೇವೆ. ಅದೇನೆಂದರೆ ಹೆಚ್ಚಾದ ಭೂಮಿಯ ಮೇಲಿನ **"ಪ್ರಾಕೃತಿಕ"** ಅಡಚಣೆಗಳಾದ ಭೂಕಂಪ, ಸುನಾಮಿ, ಸೈಕ್ಲೋನ್ ಇತರೆ ಉಂಟಾಗುತ್ತಿದೆ.

.........ಮತ್ತು ಎಲ್ಲಾ ಕಡೆಗಳಲ್ಲಿ ಈ ಸಂಕೇತಗಳು ನೆರವೇರುವದನ್ನು ನಾವು ನೋಡುತ್ತಲೇ ಇದ್ದೇವೆ !!

(ಮತ್ತಾಯ 24, ಲೂಕ 21 ಮತ್ತು ಮಾರ್ಕನ ಸುವಾರ್ತೆ 13ನೇ ಅಧ್ಯಾಯಗಳನ್ನು ಓದಿ, ಕರ್ತನು ಹೇಳಿರುವ ಈ **"ಸಂಕೇತ"** ಗಳನ್ನು ಕುರಿತು ಹೆಚ್ಚಾದ ಮತ್ತು ಪೂರ್ತಿಯಾದ ವಿವರಗಳನ್ನು ಅಭ್ಯಾಸಮಾಡಿರಿ).

➡ ನಿಜವಾಗಿಯೂ ನಮ್ಮ ಸುತ್ತಲೂ ಕರ್ತನ ಪ್ರತ್ಯಕ್ಷತೆಯ **"ಸೂಚನೆಗಳು"** ನೆರವೇರಿರುವದನ್ನು ನಾವು ನೋಡುತ್ತೇವೆ !!

## ಈಗ ನಾವು ಕರ್ತನ ಹಿಂದಿರುಗುವಿಕೆಯ ದಿನಾಂಕ ಅಥವಾ ವರ್ಷವನ್ನು ನಿಖರವಾಗಿ ಗುರುತಿಸಲು ಸಾಧ್ಯವೇ?

ಈ ಉತ್ತರಕ್ಕೆ ನಾವು ಇನ್ನೊಂದು ಪ್ರವಾದನೆಯನ್ನು ಅಧ್ಯಯನ ಮಾಡಬೇಕಾಗಿದೆ –

**ದಾನಿಯೇಲನು 12 : 11, 12**

**"ನಿತ್ಯಹೋಮವು ನೀಗಿಸಲ್ಪಟ್ಟು ಹಾಳು ಮಾಡುವ ಅಸಹ್ಯ ವಸ್ತುವು ಪ್ರತಿಷ್ಠಿತವಾದ ಮೇಲೆ ಸಾವಿರದ ಇನ್ನೂರ ತೊಂಭತ್ತು ದಿನಗಳು ಕಳೆಯಬೇಕು".**

Vs -12- **"ಸಾವಿರದ ಮುನ್ನೂರ ಮೂವತ್ತೈದು ದಿನಗಳು ಬರುವ ವರೆಗೆ ಕಾದಿರುವವನೇ ಭಾಗ್ಯವಂತನು."**

**"ದಿನಗಳು"** ಎಂದರೇನು? ಮತ್ತು ಈ ದಿನಗಳ ಸಂಖ್ಯೆಯ ಅರ್ಥವೇನು?

ವಾಕ್ಯ 11 ಮತ್ತು 12 ರಲ್ಲಿರುವ ಕಾಲ ಪ್ರವಾದನೆಯು ಇದೇ ಅಧ್ಯಯನದಲ್ಲಿರುವ ಕೆಳಗಿನ ವಾಕ್ಯಕ್ಕೆ ಸಂಬಂಧಪಟ್ಟಿದೆ –

**ದಾನಿಯೇಲನು 12 : 7**

**"ಶಾಶ್ವತ ಜೀವಸ್ವರೂಪನಾಣೆ, ಒಂದು ಕಾಲು ಎರಡುಕಾಲ ಅರ್ಧಕಾಲ ಕಳೆಯಬೇಕು"**

ಹೌದು ! ವಾಕ್ಯ 11 ಮತ್ತು 12 ರಲ್ಲಿ ಹೇಳಿರುವ ಎರಡು ಕಾಲಗಳು ಇಲ್ಲಿ ಹೇಳಿರುವ **"ಒಂದು ಕಾಲ ಎರಡು ಕಾಲ ಅರ್ಧಕಾಲ"** ಇದಕ್ಕೂ ಸಹ ಸಂಬಂಧಪಟ್ಟಿರಬೇಕು.

ಈಗ ಈ ನಿರ್ಧಿಷ್ಟವಾದ ಕಾಲಪ್ರವಾದನೆಯನ್ನು ಬೇರೆ ಎರಡು ವಾಕ್ಯಗಳಲ್ಲಿಯೂ ಕೊಡಲಾಗಿದೆ –

**ಪ್ರಕಟಣೆ 12:14.**

**"ಆ ಸ್ತ್ರೀಯು ಅರಣ್ಯದಲ್ಲಿದ್ದ ತನ್ನ ಸ್ಥಳಕ್ಕೆ ಹಾರಿಹೋಗುವದಕ್ಕಾಗಿ ಆಕೆಗೆ ದೊಡ್ಡ ಹದ್ದಿನ ಎರಡು ರೆಕ್ಕೆಗಳು ಕೊಡಲ್ಪಟ್ಟವು; ಅಲ್ಲಿ ಒಂದು ಕಾಲ, ಕಾಲಗಳು, ಅರ್ಧ ಕಾಲ ಸರ್ಪನ ಮುಖಕ್ಕೆ ಮರೆಯಾಗಿ ಪೋಷಣೆ ಹೊಂದುತ್ತಾಳೆ."**

ಮತ್ತೆ ಇದನ್ನು ನಾವು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

**ದಾನಿಯೇಲನು** 7:25 – **".....ಆ ಭಕ್ತರು ಒಂದುಕಾಲ, ಎರಡುಕಾಲ, ಅರ್ಧಕಾಲ ಅವನ ಕೈವಶವಾಗಿರುವರು."**

ನಾವು ಈಗಾಗಲೇ ಅಭ್ಯಾಸ # 35/36 ಮತ್ತು 37 ರಲ್ಲಿ ಈ ನಿರ್ಧಿಷ್ಟವಾದ ಕಾಲಪ್ರವಾದನೆಯು ಕ್ರಿಸ್ತ ವಿರೋಧಿಯ ಅಧಿಕಾರದ ಕಾಲವೆಂದು ನೋಡಿದ್ದೇವೆ.

ನಾವು ಮೊದಲೇ ನೋಡಿದ ಹಾಗೆ "**ಕಾಲ**" ಎಂಬ ಪದವು ಕಾಲ ಪ್ರವಾದನೆಯಲ್ಲಿ ಒಂದು ವರ್ಷವನ್ನು ಸೂಚಿಸುತ್ತದೆ ಮತ್ತು ಒಟ್ಟು ಇಂತಹ **3½** "**ವರ್ಷ**" ಗಳಿವೆ.

ಪ್ರವಾದನಾ ಕಾಲಾವಧಿಯನ್ನು –

**"ಅಲ್ಲಿ ಆಕೆಗೆ ಸಾವಿರದ ಇನ್ನೂರ ಅರವತ್ತು ದಿನಗಳವರೆಗೆ ಪೋಷಣೆಯಾಗಬೇಕು .....**" ಎಂದು ತೋರಿಸಲಾಗಿದೆ (ಪ್ರಕಟನೆ 2 : 6)

ಮತ್ತು ..........

**"ನಾಲ್ವತ್ತೆರಡು ತಿಂಗಳುಗಳವರೆಗೆ ಮುಂದುವರಿಯುವ ಹಾಗೆ ಅದಕ್ಕೆ ಅಧಿಕಾರವು ಕೊಡಲ್ಪಟ್ಟಿತು"** ಎಂದು ಓದುತ್ತೇವೆ (**ಪ್ರಕಟನೆ** 13 : 5)

**ಈ 1260 "ದಿನಗಳು" ಎಂದರೆ ನೇರವಾದ ಅಥವಾ ನಿಜವಾದ 1260 ವರ್ಷಗಳ ಕಾಲಾವಧಿಯನ್ನು ಸೂಚಿಸುತ್ತದೆ. ಇದು ಕ್ರಿ.ಶ.539ರಿಂದ ಆರಂಭಗೊಂಡು ಕ್ರಿ.ಶ. 1799 ರಲ್ಲಿ ಕೊನೆಗೊಳ್ಳುತ್ತದೆ.**

**ಮತ್ತು ಇದಕ್ಕೆ ಸಂಬಂಧಪಟ್ಟ ಇನ್ನೆರಡು ಕಾಲಪ್ರವಾದನೆಗಳು ದಾನಿಯೇಲನು 12ನೇ ಅಧ್ಯಾಯ ವಾಕ್ಯ 11 ಮತ್ತು 12 ರಲ್ಲಿಯೂ ಸಹ ಇದೇ ರೀತಿಯಾದ ಆರಂಭವು ಇದೇ ವರ್ಷದಲ್ಲಿ ಆಗುತ್ತದೆ –**

**ಕ್ರಿ.ಶ. 539**

ಇದಲ್ಲದೆ ದಾನಿಯೇಲನು 12 : 11 ರಲ್ಲಿ ಹೇಳಿದ ವಾಕ್ಯವನ್ನು ಬಿಟ್ಟು, ಈ ಕಾಲಪ್ರವಾದನೆಯ ಆರಂಭವನ್ನು ಕುರಿತು ಕೆಳಗಿನ ವಾಕ್ಯದಲ್ಲಿ ಬಹಳ ಸ್ಪಷ್ಟವಾಗಿ ಹೇಳಿದೆ –

**"ಪ್ರತಿದಿನದ ಯಜ್ಞನು ಸಕಾಲಕ್ಕೆ ತೆಗೆದುಹಾಕಲ್ಪಟ್ಟು ಹಾಳು ಮಾಡುವಂಥ ಅಸಹ್ಯವು ಇರಿಸಲ್ಪಡುವವರೆಗೂ"** ಇಲ್ಲಿ **"ಹಾಳು ಮಾಡುವಂಥ ಅಸಹ್ಯವು"** ಎಂದರೆ ಹೆಸರಿಗೆ ಮಾತ್ರ ಕ್ರೈಸ್ತರಾಗಿರುವ ಕ್ರಿಸ್ತಗ ವಿರೋಧಿಯ ವ್ಯವಸ್ಥೆಯನ್ನು ಸೂಚಿಸುತ್ತದೆ.

## "ಪ್ರತಿದಿನದ ಯಜ್ಞವು" ಎಂದರೇನು?

ಇದು ಶಿಲುಭೆಯನ್ನು ಹೊತ್ತುಕೊಳ್ಳುವದಕ್ಕಾಗಿ ಮತ್ತು ಇದು ಮಾತ್ರ ಶಿಶ್ಯತ್ವಕ್ಕೆ ಮೂಲವಾಗಿದೆ ಎಂಬುದಕ್ಕೆ ಸಾಂಕೇತಿಕ ಚಿತ್ರಣವಾಗಿದೆ ಎಂದು ಕರ್ತನು ಸ್ಪಷ್ಟವಾಗಿ ಹೇಳಿರುವದನ್ನು ಕೆಳಗೆ ಓದುತ್ತೇವೆ –

**ಲೂಕ 9 : 23**

**"ಆತನು ಅವರೆಲ್ಲರಿಗೆ – ಯಾವನಾದರೂ ನನ್ನ ಹಿಂದೆ ಬರುವದಾದರೆ ಅವನು ತನ್ನನ್ನು ನಿರಾಕರಿಸಿ ತನ್ನ ಶಿಲುಬೆಯನ್ನು ಪ್ರತಿದಿನ ಹೊತ್ತುಕೊಂಡು ನನ್ನನ್ನು ಹಿಂಬಾಲಿಸಲಿ"**

ಈ ಕ್ರೈಸ್ತನಾಗುವದಕ್ಕೆ ಕರೆಯಲ್ಪಟ್ಟ ಸತ್ಯವು –

**"ಹಾಳು ಮಾಡುವಂತಹ ಅಸಹ್ಯವು"**

**"ಇರಿಸಲ್ಪಟ್ಟಾಗ"** (ಸ್ಥಾಪಿಸಲ್ಪಟ್ಟಾಗ) ಕಳೆದುಹೋಯಿತು.

ಹೌದು ! ಆ **"ಇರಿಸಲ್ಪಟ್ಟ"** (ಸ್ಥಾಪಿಸಲ್ಪಟ್ಟ) ದಿನಾಂಕವು ಕ್ರಿ.ಶ. 539 !


ಆದ್ದರಿಂದ ದಾನಿಯೇಲನು 12 : 11 ರ ಕಾಲಪ್ರವಾದನೆಯಾದ **"ಒಂದು ಸಾವಿರದ ಇನ್ನೂರ ತೊಂಬತ್ತು ದಿವಸಗಳು"** ಏನು ಸೂಚಿಸುತ್ತದೆ ಎಚಿದರೆ –

| 1290 | + | 539 | = 1829 |
|---|---|---|---|
| ಪ್ರವಾದನ ಕಾಲಾವಧಿ"ದಿನಗಳಲ್ಲ" ಆದರೆ ನೇರವಾದ ವರ್ಷಗಳಲ್ಲಿ. | | ಈ ಕಾಲಾವಧಿಯ ಆರಂಭದ ವರ್ಷ. | |

ಹೌದು ‼ ಈ ಕಾಲಪ್ರವಾದನೆಯು 1829ನೇ ವರ್ಷವನ್ನು ತೋರಿಸುತ್ತಿದೆ ‼

**ಈ ದಿನಾಂಕದ ಸೂಚನೆ ಏನಾಗಿದೆ?**

ಈ ವರ್ಷದಲ್ಲಿ ಮೊದಲನೆಯು ಬಾರಿಗೆ ಕರ್ತನ ಎರಡನೇ ಬರುವಿಕೆಯನ್ನು ಕುರಿತು ಸಾರಲಾಯಿತು !



ಈ ವರ್ಷದಲ್ಲೆ –

**"ದಿ ಮಿಲ್ಲರ್ ಮೂಮೆಂಟ್"**

ಆರಂಭವಾಯಿತು. ಇದನ್ನು ಶ್ರದ್ಧೆಯುಳ್ಳ ಕ್ರೈಸ್ತ ಬೋಧಕನಾದ **"ವಿಲ್ಲಿಯಮ್ ಮಿಲ್ಲರ್"** ಆರಂಭಿಸಿದರು.

ಈತನು ಕರ್ತನ ಎರಡನೆ ಬರುವಿಕೆಯ ಕಾಲ ಪ್ರವಾದನೆಗಳನ್ನು ಕುರಿತು ಗಮನ ಸೆಳೆಯುವದಕ್ಕೆ ಆರಂಭಿಸಿದನು.

ವಿಲ್ಲಿಯಮ್ ಮಿಲ್ಲರ್‌ರವರು ಕರ್ತನ ಎರಡನೆ ಬರುವಿಕೆಯ ದಿನಾಂಕವು ಅಕ್ಟೋಬರ್ **22ನೇ ತಾರೀಖು 1844** ವರ್ಷವೆಂದು ಪ್ರಚಾರ ಪಡಿಸಿದನು.

ಕರ್ತನು ಶರೀರದೊಂದಿಗೆ ಕಣ್ಣಿಗೆ ಕಾಣುವ ಹಾಗೆ ಹಿಂತಿರುಗುವನು (ಪ್ರಕಟನೆ 1:7 ರ ಆಧಾರದ ಮೇರೆಗೆ) ಮತ್ತು ನಿಜವಾಗಿ (ಅರ್ಥಗತವಾಗಿ) ಇಡೀ ಭೂಮಿಯು ನಾಶವಾಗುವದು ಎಂದು ಪ್ರಚಾರಪಡಿಸಿದನು (2 ಪೇತ್ರನು 3 : 10 ಮತ್ತು 2 ಥಸಲೋನಿಕದವರಿಗೆ 1 : 8,9 ರ ಆಧಾರದ ಮೇರೆಗೆ)

ಆನೇಕರು ಆಗ ತಮ್ಮ ಕೆಲಸಗಳನ್ನು ಬಿಟ್ಟು, ತಾವು ಕೊಟ್ಟ ಸಾಲಗಳನ್ನು ಹಿಂತೆಗೆಯದೆ, ಮರೆತು ಬಿಟ್ಟು ಆತನನ್ನು ಹಿಂಬಾಲಿಸಿದರು !

ಇದನ್ನು –

**"ದಿ ಸೆಕೆಂಡ್ ಅಡ್‌ವೆಂಟಿಸ್ಟ್"** ಎಂದು ಕರೆಯಲಾರಂಭಿಸಿದರು.

ಆದರೆ ಕೊನೆಯದಾಗಿ ಆ ದಿನ ಬಂತು ಮತ್ತು ದೊಡ್ಡ ಗುಂಪು ನಡುರಾತ್ರಿಯಲ್ಲಿ ಒಂದುಗೂಡಿ (ಮತ್ತಾಯ 25:6ರ ಆಧಾರದ ಮೇರೆಗೆ) ಅಕ್ಟೋಬರ್ 22ನೇ ತಾರೀಖು 1844ನೇ ವರ್ಷದಲ್ಲಿ ಆತುರದಿಂದ ಕಾಯುತ್ತಿದ್ದರು ಮತ್ತು ಕರ್ತನ ಎರಡನೆ ಬರುವಿಕೆಯ ಆ ನಡುರಾತ್ರಿಯಲ್ಲಿ ಗಂಟೆ ಭಾರಿಸಿತು .......... ಆದರೆ ಕರ್ತನು ಬರಲಿಲ್ಲ !! (ಹಾಗೆ ನಡೆಯಲಿಲ್ಲ).

ಆಗ ಭಯ ಹುಟ್ಟಿಸುವ (ವಿಲಕ್ಷಣ) ನಿಶಬ್ಧವಾಗಿತ್ತು !

**ಇದನ್ನು - "ಅತಿದೊಡ್ಡ ನಿರಾಶೆ" ಎಂದು ಕರೆಯಲಾಗುತ್ತದೆ**

**ಏನಾಗಿತ್ತು ?**

**ವಿಲ್ಲಿಯಮ್ ಮಿಲ್ಲರ್‌ನವರು ಕರ್ತನ ಸೇವೆಕನಲ್ಲವೆ?**

**ಆತನ ಪ್ರವಾದನ ದಿನಾಂಕದ ಲೆಕ್ಕಾಚಾರ ಏಕೆ ವಿಫಲವಾಯಿತು?**

ಇವೆಲ್ಲಾ ಪ್ರಶ್ನೆಗಳಿಗೆ ಕೆಳಗಿನ ವಾಕ್ಯದಲ್ಲಿ ಉತ್ತರವಿದೆ –

**ಮತ್ತಾಯ 25 : 5**

"..........ಮದಲಿಂಗನು ತಡಮಾಡಿದಾಗ..........."

ಹೌದು! ಈ ವಿಫಲಗೊಂಡ ದಿನಾಂಕವು ಕೆಳಗಿನ ವಾಕ್ಯವು ನೆರವೇರುವುದನ್ನು ಕುರಿತು ಹೇಳುತ್ತದೆ –

"...ಮದಲಿಂಗನು ತಡಮಾಡಿದಾಗ..."

ಈ "ತಡಮಾಡಿದಾಗ" ಎಂದರೆ "ಮದಲಿಂಗನು" ಬರುತ್ತಾನೆಂದು ನಿರೀಕ್ಷಿಸಲಾಗುತ್ತಿತ್ತು, ಎಂಬ ನಿಜಾಂಶವನ್ನು ಸೂಚಿಸುತ್ತದೆ. ಆದರೆ –

**.....ಆಗ ಆತನು ಬರಲಿಲ್ಲ !**

ಇದೇ "ಮದಲಿಂಗನು" ...1844ನೇ ವರ್ಷದಲ್ಲಿ ಕರ್ತನು ಎರಡನೆ ಬರುವಿಕೆಯು "ತಡಮಾಡಿದ" ವಿಷಯದ ವೈಶಿಷ್ಟ್ಯವಾಗಿದೆ !!

**ಹಾಗಾದ್ರೆ ಈ ಪ್ರವಾದನೆಯು ನಮ್ಮನ್ನು ಎಲ್ಲಿಗೆ ಕೊಂಡೊಯ್ಯುತ್ತದೆ ?**

ಈಗ ನಾವು ಕೆಳಗಿನ ವಾಕ್ಯವನ್ನು ಓದೋಣ –

**ದಾನಿಯೇಲನು 12 : 12**

"ಸಾವಿರದ ಮು;ನ್ನೂರ ಮೂವತ್ತೈದು ದಿನಗಳು ಬರುವವರೆಗೆ ಕಾದಿರುವವನೇ ಭಾಗ್ಯವಂತನು".

ಹೌದು ! ಈ ಪ್ರವಾದನೆಯ ಇನ್ನೊಂದು ದಿನಾಂಕವನ್ನು ಕುರಿತು ಮಾತನಾಡುತ್ತದೆ ಮತ್ತು ಆ ದಿನಗಳು ಬರುವವರೆಗೆ ಮತ್ತು ಕಾದಿರುವದನ್ನು ಕುರಿತು ಮಾತನಾಡುತ್ತದೆ !!

ಇದೇ ದಿನಾಂಕವು ಕರ್ತನ ಎರಡನೆ ಬರುವಿಕೆಯ ದಿನಾಂಕವಾಗಿದೆ !!

ಈಗ ಆ ದಿನಾಂಕವನ್ನು ಲೆಕ್ಕಾಚಾರ ಮಾಡೋಣ –

**539** + **1335** = **1874 ಕ್ರಿ.ಶ.**


**ಈ ಪ್ರವಾದನ ಕಾಲಾವಧಿಯ ಲೆಕ್ಕಾಚಾರಗಳ ಆರಂಭದ ವರ್ಷ.**

**ಪ್ರವಾದನ "ದಿನಗಳು", ಇದು ನೇರವಾದ (ಅರ್ಥಗತ) ವರ್ಷಗಳಿಗೆ ಸಮಾನವಾಗಿದೆ.**

ಹೌದು ! ಈ ವರ್ಷದಲ್ಲಿ (1874) ಕರ್ತನು ಎರಡನೆಯ ಸಾರಿ **“ರಾತ್ರಿಕಾಲದಲ್ಲಿ ಕಳ್ಳನು ಹೇಗೆ ಬರುತ್ತಾನೋ ಹಾಗೆಯೇ ಕರ್ತನು ಬಂದನು”**

ಸ್ವಲ್ಪವೂ ಯಾರಿಗೂ ಗೊತ್ತಾಗಲಿಲ್ಲ !

**ಮತ್ತು ಅಲ್ಲಿಂದ ಆತನ "ಪರೌಸಿಯಾ" ಅಥವಾ ಎರಡನೆಯ ಪ್ರತ್ಯಕ್ಷ ಆರಂಭವಾಯಿತು.**




ಈಗ ನಾವು ಈ 1874 ರ ದಿನವನ್ನು ಇನ್ನೂ ಬೇರೆ ಎರಡು ಕೋನದಲ್ಲಿ ನೋಡಿ ದೃಢಪಡಿಸಿಕೊಳ್ಳೋಣ –

# 2. ಆಜ್ಞೆಯಲ್ಲಿನ ಕಾಲಗಣನೆ.

ಇಸ್ರಾಯೇಲ್ಯರಿಗೆ ಕೊಟ್ಟಂತಹ ಆಜ್ಞೆಯನ್ನು "ಜುಬಿಲಿ" ಆಜ್ಞೆ ಎಂದು ಕರೆಯಲಾಗುತ್ತದೆ.

**("ಜೂಬಿಲಿ ಆಜ್ಞೆ" ಯ ವಿವರಗಳನ್ನು ಅಭ್ಯಾಸ # 39 ರಲ್ಲಿ ನೋಡಿದ್ದೇವೆ)**

ಈ ಆಜ್ಞೆಯು ಪ್ರತಿ 50 ವರ್ಷಗಳಲ್ಲಿ ಇಸ್ರಾಯೇಲ್ ಜನರ ಹಕ್ಕು ಮತ್ತು ಸ್ವತ್ತುಗಳು ಮರಳಿ ಪಡೆಯುವಂತೆ ನೋಡುಕೊಳ್ಳುತ್ತಿತ್ತು. ಇದು ಆದಾಮನ ಕುಟುಂಬವಾದ ಇಡೀ ಲೋಕದ ಮಹಾ ಮರಳಿ ಪಡೆಯುವಿಕೆಗೆ ನೆರಳಾಗಿತ್ತು (ಛಾಯೆ) ಎಂದು ನಾವು ನೋಡಿದ್ದೇವೆ !

ದೇವರ ಮಹಾಯೋಜನೆಯಲ್ಲಿ ಛಾಯೆಯಲ್ಲಿ ಇದ್ದ ಹಾಗೆ ಒಂದು ವರ್ಷದ ಜುಬಿಲಿ ಮಾತ್ರ ಇರುವದಿಲ್ಲ. ಆದರೆ ನಿಜರೂಪದ ಜುಬಿಲಿ ಕಾಲದಲ್ಲಿ ಅನೇಕ ವರ್ಷಗಳಿವೆ ಎಂದು ಕೆಳಗಿನ ವಾಕ್ಯದಲ್ಲಿರುವದನ್ನು ನೋಡಿದ್ದೇವೆ –

"**ವಿಶ್ರಾಂತಿ ಕಾಲಗಳು**" ಎಂದು ಕೆಳಗಿನ ವಾಕ್ಯದಲ್ಲಿ ನೋಡುತ್ತೇವೆ –

**ಅಪೋಸ್ತಲರ ಕೃತ್ಯಗಳು 3 : 19**

**"....ಆಗ ಕರ್ತನ ಸನ್ನಿಧಾನದಿಂದ ನಿಮಗೆ ವಿಶ್ರಾಂತಿಕಾಲಗಳು ಒದಗುವವು."**

ಮತ್ತೆ ಕೆಳಗಿನ ವಾಕ್ಯದಲ್ಲಿ ಹೀಗೆ ಓದುತ್ತೇವೆ –

**ಅಪೋಸ್ತಲರ ಕೃತ್ಯಗಳು 3 : 21**

**"ಲೋಕಾದಿಯಿಂದ ತನ್ನ ಎಲ್ಲಾ ಪರಿಶುದ್ಧ ಪ್ರವಾದಿಗಳ ಬಾಯಿಯ ಮುಖಾಂತರ ದೇವರು ತಿಳಿಸಿದ್ದೆಲ್ಲವುಗಳು ಯಥಾಸ್ಥಿತಿಗೆ ಬರುವ ಸಮಯದವರೆಗೆ ಪರಲೋಕದಲ್ಲಿ ಆತನು ಇರುವದು ಅವಶ್ಯವಾಗಿತ್ತು"**

ಮತ್ತೆ ಇದನ್ನು ಕೆಳಗಿನ ವಾಕ್ಯದಲ್ಲಿ ಹೀಗೆ ಓದುತ್ತೇವೆ .....

**ಮತ್ತಾಯ** 19:28 – "**............ಹೊಸ ಸೃಷ್ಟಿಯಲ್ಲಿ.........**"

ಇಲ್ಲಿ "ಕಾಲ" ಎಂದರೆ ಒಂದು ವರ್ಷ ಮತ್ತು "ಕಾಲಗಳು" ಎಂದರೆ ಅನೇಕ ವರ್ಷಗಳು.


ಈಗ ಈ ಮಹಾ ಜುಬಿಲಿ ಯಾವಾಗ ಆರಂಭವಾಗುತ್ತದೆ ?

ಇದಕ್ಕೆ ಉತ್ತರವನ್ನು ನಾವು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ

**ಅಪೋಸ್ತಲರ ಕೃತ್ಯಗಳು 3:20,21**

"ಇದಲ್ಲದೆ ಮೊದಲು ನಿಮಗೆ ಸಾರಲ್ಪಟ್ಟಂಥ ಯೇಸು ಕ್ರಿಸ್ತನನ್ನು ಆತನು ಕಳುಹಿಸುವನು; ....ದೇವರು ತಿಳಿಸಿದ್ದೆಲ್ಲವುಗಳು ಯಥಾಸ್ಥಿತಿಗೆ ಬರುವ ಸಮಯದ ವರೆಗೆ ಪರಲೋಕದಲ್ಲಿ ಆತನು ಇರುವದು ಅವಶ್ಯವಾಗಿತ್ತು."

**ಹೌದು! ಇದು ಆತನ ಎರಡನೆ ಬರುವಿಕೆಯಲ್ಲಿ ಆಗುವುದು !**



**ಹಾಗಾದ್ರೆ ನಾವು ಅಧ್ಯಯನ ಮಾಡಿದ ಮಹತ್ತರವಾದ ನಿಜರೂಪದ ಜೂಬಿಲಿಯ ದಿನಾಂಕ ಯಾವುದು?**

ಇಸ್ರಾಯೇಲ್ಲರು ಕೊನೆಯದಾಗಿ ಛಾಯೆಯ ಜುಬಿಲಿಯನ್ನು ಕ್ರಿ.ಪೂ. 625 ರಲ್ಲಿ ಕೈಗೊಂಡರು ಮತ್ತು ಅರಸನಾದ ಚಿದ್ಕೀಯನ ಬೀಳುವಿಕೆಯ 19 ವರ್ಷಗಳ ನಂತರ ಇಡೀ ಇಸ್ರಾಯೇಲ್ ದೇಶದವರು ಬಾಬೆಲಿಗೆ ಗುಲಾಮರಾಗಿ 70 ವರ್ಷಗಳ ಕಾಲ ಒಯ್ಯಲ್ಪಟ್ಟರು.

ಆದ್ದರಿಂದ ಕ್ರಿ.ಪೂ. 625 ರಿಂದ ನಿಶಬ್ಧವಾಗಿ ಮತ್ತು ಯಾರಿಗೂ ತಿಳಿಯದ ಹಾಗೆ ಆ ನಿಜರೂಪದ ಜುಬಿಲಿ ಚಕ್ರವು ಆರಂಭವಾಯಿತು !!

**ಮತ್ತು ಆ ನಿಜರೂಪದ ಜುಬಿಲಿ ಚಕ್ರವನ್ನು ನಾವು ಹೇಗೆ ಲೆಕ್ಕ ಮಾಡಿದೆವು?**

- ಛಾಯೆ ಜುಬಿಲಿಯಲ್ಲಿ – 1 X 50 ವರ್ಷಗಳು
- ನಿಜರೂಪದಲ್ಲಿ ಅದು – 50 X 50 ವರ್ಷಗಳು
- ಛಾಯೆಯಲ್ಲಿ ಜುಬಿಲಿಯು 50ನೇ ವರ್ಷದಲ್ಲಿ ಆರಂಭವಾಗುತ್ತವೆ.


➡ ನಿಜರೂಪದ ಜುಬಿಲಿಯಲ್ಲಿ ಅದು 2499 ವರ್ಷಗಳ ನಂತರ ಅಥವಾ 2500ನೇ ವರ್ಷದಲ್ಲಿ ಆರಂಭವಾಗುತ್ತದೆ.

(ಈ ಎಲ್ಲಾ ವಿಷಯಗಳ ಸ್ಪಷ್ಟವಾದ ವಿವರಣೆದಯನ್ನು ಅಭ್ಯಾಸ # 39 – "ಜೂಬಿಲಿಯ ಆಜ್ಞೆ" ಯಲ್ಲಿ ನೋಡಬಹುದು)

ಆದ್ದರಿಂದ ಈ ನಿಜರೂಪ ಜುಬಿಲಿಯ 2499 ವರ್ಷಗಳ ನಂತರ ಆರಂಭವಾಗುವ ನಿಜರೂಪ ಚಕ್ರವನ್ನು ಈ ರೀತಿ ಲೆಕ್ಕ ಮಾಡಲಾಗುತ್ತದೆ.

| 2499 | - | 625 | = | 1874 ಕ್ರಿ.ಶ. |
|---|---|---|---|---|
| (ನಿಜವಾದ ಜುಬಿಲಿ ಆರಂಭ ವಾಗುವವರೆಗೆ ಇರುವ ಕಾಲಚಕ್ರದ ವರ್ಷಗಳು) | | (ಇಸ್ರಾಯೇಲ್ಲರು ಕೊನೆಯದಾಗಿ ಆಚರಿಸಿದ 19ನೇ ಮತ್ತು ಕೊನೆಯ ಜುಬಿಲಿ ಮತ್ತು ನಿಜರೂಪ ಕಾಲಚಕ್ರವಾದ 50 X 50 ಆರಂಭದ ವರ್ಷ) | | |

ಹೌದು ! ಕ್ರಿ.ಪೂ. ಭಾಗವಾದ 625 ನ್ನು 2499 ವರ್ಷಗಳಲ್ಲಿ ಕಳೆದಾಗ (Minusing) ನಮಗೆ ಕ್ರಿ.ಶ. ದ ಭಾಗವಾದ 1874 ವರ್ಷಗಳು ದೊರೆಯುತ್ತದೆ, ಮತ್ತು ಈ ನಿಜರೂಪ ಜುಬಿಲಿಯ ಆರಂಭ ವರ್ಷವನ್ನು ತೋರಿಸುವದು ಯಾವದೆಂದರೆ **ಕ್ರಿ.ಶ. 1874 !!**



ಹೌದು ! ಇದು ಕರ್ತನ ಎರಡನೇ ಬರುವಿಕೆಯ ದಿನಾಂಕವನ್ನು ನಿಖರವಾಗಿ ಹೋಲುತ್ತದೆ !!

ಈಗ ನಾವು ಈ ನಿಜರೂಪ ಜುಬಿಲಿಯ ವರ್ಷಗಳು ಎಷ್ಟಿರುತ್ತದೆ ಎಂದು ಅಭ್ಯಾಸಿಸೋಣ ?

ಛಾಯೆಯಲ್ಲಿ ನಾವು ನೋಡಿದ್ದೇವೆಂದರೆ ಜೂಬಿಲಿ ಆಜ್ಞೆಯಲ್ಲಿ ಅದು ಕೇವಲ ಒಂದು ವರ್ಷ ಮಾತ್ರ ಇರುತ್ತದೆ. ಆದರೆ ನಿಜರೂಪ (Antitype) ದಲ್ಲಿ ಅನೇಕ ವರ್ಷಗಳು (ಕಾಲಗಳು) ಇರುತ್ತದೆ.

ಅವು ಎಷ್ಟು ವರ್ಷಗಳಿರಬಹುದು?

ಅದಕ್ಕೆ ಉತ್ತರವನ್ನು ಕೆಳಗಿನ ವಾಕ್ಯದಲ್ಲಿ ನೋಡುತ್ತೇವೆ.

**ಪ್ರಕಟನೆ 20 : 4 ಮತ್ತು 6**

**ವಾಕ್ಯ** – 4 - "...... ಅವರು ಜೀವಿತರಾಗಿ ಎದ್ದು ಸಾವಿರ ವರುಷ ಕ್ರಿಸ್ತನೊಂದಿಗೆ ಆಳಿದರು".

**ವಾಕ್ಯ** – 6 - "....... ಕ್ರಿಸ್ತನೊಂದಿಗೆ ಆ ಸಾವಿರ ವರುಷ ಆಳುವರು"

ಹೌದು ಆ ಕಾಲವು ಕ್ರಿಸ್ತನ ರಾಜ್ಯದ್ದಾಗಿರುತ್ತದೆ.

ಹೌದು ! ಅದು ಸಾವಿರ ವರುಷಗಳ ಕಾಲವಾಗಿರುತ್ತದೆ !!

ಆದ್ದರಿಂದ ನಿಜರೂಪ ಜುಬಿಲಿಯ ಕಾಲವು –

**ಕ್ರಿ.ಶ. 1874 ರಿಂದ ಕ್ರಿ.ಶ. 2874 ವರೆಗೆ**

ಆದ್ದರಿಂದ, ಕಾಲಗಣನೆ ಆಜ್ಞೆಯ ಮುಖಾಂತರ ಎರಡನೆಯ ಬರುವಿಕೆಯ ದಿನಾಂಕ ಕ್ರಿ.ಶ. 1874 ಎಂದು ಇಲ್ಲಿಯೂ ಸಹ ನೋಡುತ್ತೇವೆ.

ಈಗ ನಾವು ಮೂರನೆಯ ಕೋನದಿಂದ ನೋಡೋಣ –

## 3. ಸತ್ಯವೇದ ಕಾಲಗಣನೆ

ಈಗ ನಾವು ಎರಡನೆಯ ಬರುವಿಕೆಗೆ ಬೆಂಬಲ ಕೊಡುವಂತಹ ದಿನಾಂಕವನ್ನು ಸತ್ಯವೇದ ಕಾಲಗಣನೆಯಲ್ಲಿ ಹುಡುಕೋಣ. ಸತ್ಯವೇದದಲ್ಲಿ ಕಾಲ ವೃತ್ತಾಂತ

(ಗಣನೆ) ಅಧ್ಯಯನದಲ್ಲಿ (ಅಭ್ಯಾಸ # 22) ಕ್ರಿಸ್ತ ಪೂರ್ವ (ಬಿ.ಸಿ.) ಕಾಲವು 4128 ವರ್ಷಗಳು ಎಂದು ಸ್ಪಷ್ಟವಾಗಿ ಲೆಕ್ಕಮಾಡಿ ನೋಡಿದ್ದೇವೆ !

ಇದು ಆದಾಮನ ಸೃಷ್ಟಿಯಿಂದ ಆರಂಭವಾಗಿ (ಆದಿಕಾಂಡ 5:3)

ಕ್ರಿ.ಶ.ದ ಆರಂಭದವರೆಗೆ – ಅಂದರೆ ಕ್ರಿ.ಶ., 1 ‼

ಈಗ ಸ್ತ್ರವೇದದಲ್ಲಿನ ಕಾಲ ಗಣನೆಯು ಎರಡನೇ ಬರುವಿಕೆಗೆ ಬೆಂಬಲ ನೀಡುತ್ತದೆಯೆ ಎಂದು ತಿಳಿಯಲು ಮೊದಲು ಕೆಳಗಿನ ವಾಕ್ಯವನ್ನು ನೋಡೋಣ –

## ಯೋಬನು 5 : 17-19

**"ಇಗೋ, ದೇವರು ಯಾವನನ್ನು ಶಿಕ್ಷಿಸುವನಿಗೆ ಅವನು ಧನ್ಯನು ; ಸರ್ವಶಕ್ತನ ದಂಡನೆಯನ್ನು ತಾತ್ಸಾರ ಮಾಡಬೇಡ ಗಾಯಮಾಡುವವನೂ ಗಾಯ ಕಟ್ಟವವನೂ ಆತನೇ, ಹೊಡೆಯುವ ಕೈಯೇ ವಾಸಿ ಮಾಡುತ್ತದೆ".**

**ವಾಕ್ಯ** – 19 - **"ಆರು ಇಕ್ಕಟ್ಟುಗಳಿಂದ ಆತನು ನಿನ್ನನ್ನು ಬಿಡಿಸುವನು; ಏಳನೆಯ ಇಕ್ಕಟ್ಟು ಉಂಟಾದರೂ ಯಾವ ಕೇಡೂ ನಿನ್ನನ್ನು ಮುಟ್ಟದು"**

ಇದೊಂದು ವಿಚಿತ್ರವಾದ ಮತ್ತು ಸುಂದರವಾದ ವಾಕ್ಯವಾಗಿದೆ.

ಇದು – **"ಆರು ಇಕ್ಕಟ್ಟುಗಳು"** ಮತ್ತು **"ಏಳನೆಯ"** ಇಕ್ಕಟ್ಟಿನಿಂದ ಉಂಟಾಗುವ ಬಿಡುಗಡೆಯನ್ನು ಕುರಿತು ಮಾತನಾಡುತ್ತದೆ.

## ಇದರ ಅರ್ಥವೇನು?

ಇದು ಮನುಷ್ಯನಿಗಾಗಿ ದೇವರ ದೈವೀಕ ಯೋಜನೆಯನ್ನು ಕುರಿತು ಮಾತನಾಡುತ್ತದೆ –

**"ಒಳ್ಳೇದರ ಕೆಟ್ಟದ್ದರ ತಿಳುವಳಿಕೆಯನ್ನುಂಟುಮಾಡುವ ಮರದ ಹಣ್ಣನ್ನು"**

(ಆದಿಕಾಂಡ 2 :16)

ತಿನ್ನುವುದರ ಕುರಿತು ಮಾತನಾಡುತ್ತೇನೆ.

ಅಥವಾ ಬೇರೆ ಮಾತಿನಲ್ಲಿ ಹೇಳಬೇಕಾದರೆ ಒಳ್ಳೇದರ ಮತ್ತು ಕೆಟ್ಟದ್ದರ ಅನುಭವಗಳು ಉಂಟಾಗುವುದಕ್ಕೆ ನೇಮಿಸಿರುವ ಕಾಲಗಳು ಎಂದು ಸೂಚಿಸುತ್ತದೆ ‼

ಈ **"ಏಳನೆ"** ಇಕ್ಕಟ್ಟು ಯಾವ ಕೇಡು ನಿನ್ನನ್ನು ಮುಟ್ಟದು ಎಂದರೆ ಪಾಪ ಮತ್ತು **"ಮರಣ"**ದ ಕೆಟ್ಟತನದಿಂದ ಬಿಡುಗಡೆ ಹೊಂದುವ ಕಾಲವನ್ನು ಸೂಚಿಸಬೇಕು.

ಈ ಕಾಲಾವಧಿಯು ದೇವರ ರಾಜ್ಯವಾಗಿದ್ದು 1000 ವರ್ಷಗಳು ಕ್ರಿಸ್ತನ ಅಡಿಯಲ್ಲಿ ಆಳ್ವಿಕೆ ಉಂಟಾಗುವದು ಎಂದು ನಮಗೆಲ್ಲಾ ಗೊತ್ತಿದೆ !!

ಆದ್ದರಿಂದ ಈ "**ದಿನಗಳ**" ಅಥವಾ ಏಳನೆಯ ಕಾಲವು 1000 ವರ್ಷಗಳಾಗಿದ್ದರೆ, ಹಿಂದಿನ "**ಆರು**" ಕಾಲಗಳು ಪ್ರತಿಯೊಂದೂ 1000 ವರ್ಷಗಳಾಗಿರಬೇಕು !

ಆದ್ದರಿಂದ "**ಆರು ಇಕ್ಕಟ್ಟುಗಳು**" ಎಂದರೆ –

6000 ವರ್ಷಗಳ ಕೆಟ್ಟದ್ದರ ಅನುಮತಿ ಮತ್ತು ಸೈತಾನ ಮತ್ತು ಆತನ ದೂತರು – ಬಿದ್ದುಹೋದ ದೂತರ ಆಳ್ವಿಕೆಯ ಕಾಲವನ್ನು ಸೂಚಿಸಬೇಕು !!

**ಆದ್ದರಿಂದ ದೇವರ ದೈವೀಕ ಯೋಜನೆಯಲ್ಲಿ -**
**ಅರು ಸಾವಿರ ವರ್ಷಗಳು ಅಥವಾ ಆರು "ದಿನಗಳ" "ಇಕ್ಕಟ್ಟುಗಳು" ಮತ್ತು ಕೆಟ್ಟತನ ಮತ್ತು ಸೈತಾನನ ಆಳ್ವಿಕೆಗಾಗಿ ಉಂಟಾಗಿದೆ.**
**ಮತ್ತು ಏಳನೆಯ "ದಿವಸ" ಆ "ಕೆಟ್ಟತನ" ದಿಂದ ಕ್ರಿಸ್ತನ ಸಾವಿರ ವರ್ಷದ ಆಳ್ವಿಕೆ ಅಡಿಯಲ್ಲಿ ಬಿಡುಗಡೆಯಾಗಲು ಉಂಟಾಗಿದೆ.**

ಹೌದು ! ನಿಜವಾಗಿಯೂ ! ಈ ವಾಕ್ಯದಲ್ಲಿ ದೇವರ ದೈವೀಕ ಯೋಜನೆ ಮತ್ತು ಅದರ ಕಾಲಾವಧಿಗಳನ್ನು ಕುರಿತು ಸತ್ಯವೆಂಬ ಮಹಾ ರತ್ನವನ್ನು ಕಂಡುಹಿಡಿದಿದ್ದೇವೆ !

ಇದನ್ನು ರಾಜನಾದ ನೆಬೂಕದ್ನೆಚ್ಚರನ ಅನುಭವಗಳಲ್ಲಿ ಇನ್ನೂ ದೃಢವಾಗುವುದನ್ನು ಕುರಿತು ವಾಕ್ಯದಲ್ಲಿ ಓದುತ್ತೇವೆ –

**ದಾನಿಯೇಲನು 4 : 32**

**"ಅವರು ನಿನ್ನನ್ನು ಮನುಷ್ಯರೊಳಗಿಂದ ತಳ್ಳಿಬಿಡುವರು. ಮಹೋನ್ನತನು ಮನುಷ್ಯರ ರಾಜ್ಯವನ್ನಾಳುವನೆಂದೂ ತನ್ನ ಮನಸ್ಸಿಗೆ ಸರಿಬಂದವರಿಗೆ ಅದನ್ನು ಕೊಡುವೆನೆಂದೂ ನೀನು ತಿಳಿಯುವಷ್ಟರಲ್ಲಿ ಏಳು ಕಾಲಗಳು ನಿನ್ನನ್ನು ದಾಟಿ ಹೋಗುವವು."**

ಹೌದು ! ಇಲ್ಲಿ ರಾಜನಾದ ನೆಬೂಕದ್ನೆಚ್ಚರನು ಆ "**ಏಳು ಕಾಲಗಳು**" ಒಂದು

ವಿಧವಾದ ಬುದ್ಧಿಭ್ರಮಣೆಯಲ್ಲಿ (ಹುಚ್ಚು) ಹೋಗುತ್ತಾನೆ ಮತ್ತು
ರಾಜನು **"ಆ ಕೊನೆಯ ದಿನಗಳ"** ನಂತರವೇ ! (ವಾಕ್ಯ – 34)
**"ನನ್ನ ತಿಳುವಳಿಕೆ ನನಗೆ ತಿರುಗಿ ಬಂತು"** ಎಂದು ಹೇಳುತ್ತಾನೆ (ವಾಕ್ಯ – 34)

ಹೌದು ! ಈ ಏಳನೆಯ **"ಕಾಲದಲ್ಲಿ"** ರಾಜನಾದ ನೆಬೂಕದ್ನೆಚ್ಚರನು ತನ್ನ ಬುದ್ಧಿ ಭ್ರಮಣೆಯಿಂದ ಮರಳಿ ಬರುತ್ತಾನೆ ಮತ್ತು ಆ ಭಯಂಕರ ಸ್ಥಿತಿಯಿಂದ ಬಿಡುಗಡೆ ಹೊಂದುತ್ತಾನೆ.

ಈ **"ಏಳು ಕಾಲಗಳು"** ಪರಿಪೂರ್ಣವಾಗಿ ಮನುಷ್ಯನಿಗಾಗಿ ದೇವರ ದೈವೀಕ ಯೋಜನೆಯ **"ಏಳು ದಿವಸ"**ಗಳಿಗೆ ಛಾಯೆಯಾಗಿದೆ.

ಈ ಪ್ರತಿಯೊಂದು "ದಿನಗಳು" –

**"........ ಕರ್ತನ ಎಣಿಕೆಯಲ್ಲಿ - ಒಂದು ದಿನವು ಸಾವಿರ ವರುಷಗಳಂತೆಯೂ ಸಾವಿರ ವರುಷಗಳು ಒಂದು ದಿನದಂತೆಯೂ ಅವೆ...."** (2 **ಪೇತ್ರನು** 3:8)

ಈಗ ದೇವರ ಯೋಜನೆಯಲ್ಲಿ **"ಆರು"** 1000 ವರ್ಷದ **"ದಿನಗಳು"** ಕೆಟ್ಟತನಕ್ಕಾಗಿ ಇದ್ದು, **"ಏಳನೆಯ"** 1000 ವರ್ಷದ **"ದಿನ"**ವು ಕ್ರಿಸ್ತನ ರಾಜ್ಯದ ಮೂಲಕ ಬಿಡುಗಡೆಯಿದೆ ಎಂದು ತಿಳಿದುಕೊಂಡಮೇಲೆ

**ಈ ವಿಷಯವು ಸ್ವತ: ಕರ್ತನಾದ ಯೇಸು ದೃಡಪಡಿಸುವದನ್ನು ವಿಶೇಷವಾಗಿ ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –**

**ಲೂಕ 13 : 32**

**"ಅದಕ್ಕೆ ಆತನು ಅವರಿಗೆ - ಇಗೋ, ನಾನು ಈ ದಿವಸ ಮತ್ತು ನಾಳೆ ದೆವ್ವಗಳನ್ನು ಬಿಡಿಸಿ ಸ್ವಸ್ಥ ಮಾಡುತ್ತೇನೆ; ಮೂರನೆಯ ದಿನದಲ್ಲಿ ನಾನು ಸಿದ್ಧಿಗೆ ಬರುತ್ತೇನೆ ......."**

**ಇದರ ಅರ್ಥವೇನು?**

**"ಈ ದಿವಸ ಮತ್ತು ನಾಳೆ"** ಎಂದು ನಾವು ನೆನಪಿನಲ್ಲಿಟ್ಟುಕೊಳ್ಳ ಬೇಕಾದುದ್ದೇನೆಂದರೆ ನಿಶ್ಚಯವಾಗಿ ಆತನು ಹೇಳಿದಾಗ (ನಮ್ಮ ದಿನದಂತೆ) ನಮ್ಮ ಕರ್ತನು ಒಂದು ದಿನದ 24 ಗಂಟೆಗಳ ಕಾಲವನ್ನು ಸೂಚಿಸುತ್ತಿಲ್ಲ..

ಇದು ಹಾಸ್ಯಾಸ್ಪದವೂ ಮತ್ತು ಅರ್ಥವಿಲ್ಲದಾಗಿರುತ್ತದೆ !!

ಆದರೆ ಅದರ ಅರ್ಥವು ಆಳವಾಗಿದೆ !!

ಆತನು ತನ್ನ ಸ್ವಂತ **"ದಿನ"**ದ ಅವಧಿಯಾದ **"ಸಾವಿರ ವರುಷ"** ಗಳನ್ನು ಕುರಿತು ಮಾತನಾಡುತ್ತಿದ್ದಾನೆ (2 ಪೇತ್ರ 3 : 8)

ಆದ್ದರಿಂದ ಇದನ್ನು ನಾವು ಅರ್ಥಮಾಡಿಕೊಂಡ ಮೇಲೆ, ಆತನು ಹೇಳಿದಕ್ಕೆ ಅರ್ಥವೇನೆಂದು ನೋಡೋಣ !!

ಕರ್ತನಾದ ಯೇಸು ಈ ಮಾತುಗಳನ್ನು ಸುಮಾರು ಕ್ರಿ.ಶ. 32–33 ರಲ್ಲಿ ಹೇಳಿದನು.

ಆದ್ದರಿಂದ ಆ ವರ್ಷದಲ್ಲಿ ಮನುಷ್ಯ ಜಾತಿಯ ಕಾಲ ಗಣನೆಯು ಎಷ್ಟೆಂದರೆ –

| 4128 | + | 32 | = | 4160 |
|---|---|---|---|---|
| **ಆದಾಮನ ಸೃಷ್ಟಿಯಿಂದ ಕ್ರಿ.ಶ. 1ರ ವರೆಗೆ.** | | **ಕ್ರಿ.ಶ. 1ರ ನಂತರದ ವರ್ಷಗಳು.** | | |

ಹೌದು ! ಆದಾಮನ ಸೃಷ್ಟಿಯ 4160 ವರ್ಷಗಳ ನಂತರ ಕರ್ತನು ಈ ಮಾತುಗಳನ್ನು ನುಡಿದನು.

ಆದ್ದರಿಂದ ನಮ್ಮ ಕರ್ತನ ವಾಕ್ಯದ ಅರ್ಥ ಮತ್ತು ಸೂಚನೆ ಏನೆಂದರೆ –

**"ಈ ದಿವಸ"** ➡ 4160 - 5000

**"ನಾಳೆ"** ➡ 5001 - 6000

**"ಮೂರನೆಯ ದಿನದಲ್ಲಿ"** ➡ 6001 - 7000

ಈ "ಮೂರನೆಯ ದಿನವು" ಕರ್ತನ 1000 ವರ್ಷಗಳ ರಾಜ್ಯವನ್ನು ಸೂಚಿಸುತ್ತದೆ.

➡ ಆ ರಾಜ್ಯದ ಕಾಲವು ಯಾವಾಗ ಆರಂಭವಾಗುತ್ತದೆ?

ಹೌದು ! ಕಟ್ಟತನದ 6000 ವರ್ಷಗಳು ಮುಗಿದ ನಂತರ ಆರಂಭವಾಗುತ್ತದೆ !

**ಆದ್ದರಿಂದ ಕರ್ತನ ಎರಡನೆಯ ಬರುವಿಕೆ ಮತ್ತು ಆತನ ಸಾವಿರ ವರ್ಷದ ರಾಜ್ಯವು ಕೆಟ್ಟತನದ 6000 ವರ್ಷಗಳು ಮುಗಿದ ನಂತರ ಆರಂಭವಾಗುತ್ತದೆ.**

ಈಗ ಆತನ ಈ ಕೆಳಗಿನ ವಾಕ್ಯದ ಅರ್ಥವೇನು –

**" ಇಗೋ ನಾನು ಈ ದಿವಸ ಮತ್ತು ನಾಳೆ ದೆವ್ವಗಳನ್ನು ಬಿಡಿಸಿ ಸ್ವಸ್ಥ ಮಾಡುತ್ತೇನೆ ಮೂರನೆ ದಿವಸದಲ್ಲಿ ನಾನು ಸಿದ್ಧಿಗೆ ಬರುತ್ತೇನೆ".**

ಇದು, ತಲೆಯಾಗಿ ಆತನ ಸಭೆಯಾಗಿರುವ ಶರೀರಕ್ಕೆ ಮಾಡುವ ಕೆಲಸವಾಗಿದೆ ಮತ್ತು **"ಒಳ್ಳೆಯ ಕುರುಬ"** ನಂತೆ ಆತನು ನೀಡುವ ಮಾರ್ಗದರ್ಶನವನ್ನು ಸೂಚಿಸುತ್ತದೆ (ಯೋಹಾನ 10 : 4)

ಇದು ಇಡೀ ಸುವಾರ್ತಾ ಯುಗವಾಗಿದ್ದು, ಕೊನೆಯಲ್ಲಿ ಆತನ ಎರಡನೆ ಬರುವಿಕೆ ಮತ್ತು ಮೊದಲ ಪುನರುತ್ಥಾನದಲ್ಲಿ ಆತನು "ಪರಿಪೂರ್ಣ"ವಾಗಿದ್ದು ಆ ಇಡೀ ಶರೀರವಾದ 144,000 ಅಂಗದವರು ದೈವೀಕ ಸ್ವಭಾವದಲ್ಲಿ ಮಹಿಮೆ ಹೊಂದುವರು !!

ಮತ್ತೆ ಇದೇ ರೀತಿಯಾದ ವಾಕ್ಯವನ್ನು ನಮ್ಮ ಕರ್ತನಾದ ಯೇಸು ಹೇಳಿರುವದನ್ನು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

**ಮತ್ತಾಯ 26 : 61**

**"ನಾನು ದೇವಾಲಯವನ್ನು ಕೆಡವಿ ಮೂರು ದಿವಸಗಳಲ್ಲಿ ಕಟ್ಟಬಲ್ಲೆನೆಂದು ....."**

ಇಲ್ಲಿ ಕರ್ತನು ತನ್ನನ್ನು ಮತ್ತು ಆತನ ಸಭೆಯನ್ನು **"ದೇವಾಲಯ"** ಎಂದು ಹೇಳುತ್ತಾನೆ ಮತ್ತು ಆತನ ಮತ್ತು ಶರೀರ ಅಂಗಗಳ ಮರಣವನ್ನು ಕುರಿತು –

**"ದೇವಾಲಯುವನ್ನು ಕೆಡವಿ ......."** ಎಂದು ಹೇಳುತ್ತಾನೆ.

ನಂತರ ಆತನು ದೇವಾಲಯವನ್ನು **"ಮೂರು ದಿವಸಗಳಲ್ಲಿ"** ಕಟ್ಟಬಲ್ಲೆನೆಂದು ಆತನ ಮೊದಲ ಪುನರುತ್ಥಾನ ಮತ್ತು ಸಾವಿರ ವರ್ಷಗಳ ಆರಂಭದಲ್ಲಿ ಆ ದೇವಾಲಯವನ್ನು ಕಟ್ಟುವುದನ್ನು ಕುರಿತು ಸೂಚಿಸುತ್ತಾನೆಂದು ಕೆಳಗಿನ ವಾಕ್ಯದಲ್ಲಿ ಸ್ಪಷ್ಟವಾಗಿ ಓದುತ್ತೇನೆ –

1 **ಥೆಸಲೋನಿಕದವರಿಗೆ** 4 : 16 – **"ಕರ್ತನು ತಾನೇ ಆಜ್ಞಾ ಘೋಷದೊಡನೆಯೂ ಪ್ರಧಾನ ದೂತನ ಶಬ್ಧದೊಡನೆಯೂ....... ಮತ್ತು ಆಗ ಕ್ರಿಸ್ತನಲ್ಲಿರುವ ಸತ್ತವರು ಮೊದಲು ಎದ್ದು ಬರುವರು".**

ಮತ್ತು ಈ **"ಮೂರು ದಿವಸಗಳು"** ಎಂದರೆ ಆತನ ಮೊದಲ ಮತ್ತು ಎರಡನೆ ಬರುವಿಕೆಯ ಅಂತರದಲ್ಲಿರುವ ಕಾಲವನ್ನು ಸೂಚಿಸುತ್ತದೆ.

ಹೌದು ! ಇದು ಕೆಳಗಿನ ವಿಷಯದ ಹಾಗೆ ಇದೆ –

**"ಈ ದಿವಸ ಮತ್ತು ನಾಳೆ .......... ಮೂರನೆಯ ದಿನದಲ್ಲಿ ......"**

ಮತ್ತೆ ಇದೇ ವಿಷಯವನ್ನು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

**ಯೋಹಾನ 2 : 1**

**"ಮೂರನೆಯ ದಿನದಲ್ಲಿ ಗಲಿಲಾಯದ ಕಾನಾದಲ್ಲಿ ಒಂದು ಮದುವೆ ಆಯಿತು" .**

ಹೌದು ! ಇದು ಪರಲೋಕ "ಕಾನದಲ್ಲಿ" ಕುರಿಮರಿಯಾದಾತನ ವಿವಾಹವು ಬಂತು" (ಪ್ರಕಟನೆ 19:7) ಎಂದು ಸಾಂಕೇತಿಕವಾಗಿ ಸೂಚಿಸಲಾಗಿದೆ !!

ಈ **"ವಿವಾಹ"** ಎಂದರೆ ಕರ್ತನು ಮತ್ತು ಆತನ ಶರೀರದ ಅಂಗದವರು ಮೊದಲ ಪುನರುತ್ಥಾನದಲ್ಲಿ ಅಂದರೆ 144,000 ಅಂಗಗಳಾದ ಸಭೆಯ ವರ್ಗದವರು ಆತನೊಂದಿಗೆ **"ಸೇರುವದನ್ನು"** ಸಾಂಕೇತಿಕವಾಗಿ ಸೂಚಿಸಲಾಗಿದೆ !!

ಇದನ್ನು ಕೆಳಗಿನ ವಾಕ್ಯದಲ್ಲಿ ಸ್ಪಷ್ಟವಾಗಿ ನೋಡುತ್ತೇವೆ –

1 **ಥೆಸಲೋನಿಕದವರಿಗೆ** 4 : 17 - **"........ಆಂತರಿಕ್ಷದಲ್ಲಿ ಕರ್ತನನ್ನು ಎದುರುಗೊಳ್ಳುವದಕ್ಕಾಗಿ ....... ಹೀಗಾಗಿ ಸದಾ ಕಾಲವೂ ಕರ್ತನ ಜೊತೆಯಲ್ಲಿರುವೆವು...."**

ಹೌದು ! ಇದೇ **"ಕುರಿಮರಿಯಾದಾತನ ವಿವಾಹ"** ವಾಗಿದೆ !!

ಮತ್ತು "ಮೂರನೆಯ ದಿನ" ಎಂದರೆ 1000 ವರ್ಷ ಕಾಲಾವಧಿಯ ಕರ್ತನ ರಾಜ್ಯದ ಆಳ್ವಿಕೆಯನ್ನು ಸೂಚಿಸುತ್ತದೆ.

ನಮಗೆ ಸ್ಪಷ್ಟವಾಗಿ ಗೊತ್ತಿರುವದೇನೆಂದರೆ ಕರ್ತನ ಎರಡನೆ ಬರುವಿಕೆಯ ದಿನಾಂಕವು **"ಏಳನೆಯ"** 1000 ರದ ವರ್ಷಾರಂಭದಲ್ಲಿ ಅಥವಾ 6000 ವರ್ಷಗಳು ಮುಗಿದ ನಂತರವಾಗಿರಬೇಕು.

**ಇದು ನಿಜಾನಾ? !**

ಸತ್ಯವೇದ ಕಾಲಗಣನೆಯ ಪ್ರಕಾರ ಈಗ ನಾವು ಲೆಕ್ಕಾಚಾರ ಮಾಡೋಣ –

## 6000 - 4128 = ಕ್ರಿ.ಶ. 1872

ಸತ್ಯವೇದ ಕಾಲಗಣನೆಯು.... ಕ್ರಿ.ಶ. 1872 ವರ್ಷದಲ್ಲಿ ಆದಾಮನು ಸೃಷ್ಟಿಸಲ್ಪಟ್ಟು 6000 ವರ್ಷಗಳಾಯಿತು ಎಂದು ಬೋಧಿಸುವ ಹಾಗೆ ತೋರುತ್ತದೆ.

### ಓಹ್, ನನ್ನ ದೇವರೇ!... ಇಲ್ಲಿ ಏನಾಯಿತು?

ಸತ್ಯವೇದ ಕಾಲಗಣನೆಯು ಈ ಎರಡನೇ ಬರುವಿಕೆಯ ದಿನಾಂಕವನ್ನು ಏಕೆ ಬೆಂಬಲಿಸುತ್ತಿಲ್ಲ ?

ಅಲ್ಲಿ ಎರಡು ವರ್ಷಗಳ ವ್ಯತ್ಯಾಸವಿದೆ !
ಇದರ ಅರ್ಥವೇನು?
ಆಹ್ ! ಇಲ್ಲಿಯೇ ನಮಗೆ ದೇವರು ಸತ್ಯವೇದ ಕಾಲಗಣನೆಯಿಂದ **"ಸತ್ಯವೆಂಬ ರತ್ನ"** ವು ದೊರೆಯುತ್ತದೆ !

ಸತ್ಯವೇದ ಕಾಲಗಣನೆಯಲ್ಲಿ **"ಮೊದಲ ಸಂಬಂಧಿಸಿದ"** ವಾಕ್ಯವೆಂದರೆ ಆದಿಕಾಂಡ 5:3, ಇದರಲ್ಲಿ ಆರಂಭದ ಲೆಕ್ಕಾಚಾರವನ್ನು ತೆಗೆದು ಆದಾಮನ ಸೃಷ್ಟಿಯವರೆಗೆ ಕೆಳಗಿನ ವಾಕ್ಯದಲ್ಲಿ ನೋಡುತ್ತೇವೆ –

**ಆದಿಕಾಂಡ 5 : 3** - **"ಆದಾಮನಿಗೆ ನೂರ ಮೂವತ್ತು ವರುಷವಾದಾಗ, ರೂಪದಲ್ಲಿ ತನ್ನ ಹೋಲಿಕೆಗೆ ಸರಿಯಾದ ಮಗನನ್ನು ಪಡೆದು ಸೇತನೆಂದು....."**

ಆದರೆ ಇಲ್ಲಿ ಆದಾಮನ ಸೃಷ್ಟಿಯ ಬಗ್ಗೆ ಒಂದು ತುಂಬಾ ಮುಖ್ಯವಾದ ವಿಷಯವನ್ನು ನೋಡುತಗ್ತೇವೆ –

### ಆದಿಕಾಂಡ 1:26 ಮತ್ತು 31

**ವಾಕ್ಯ – 26** - **"ತರುವಾಯ ದೇವರು - ನಮ್ಮ ರೂಪದಲ್ಲಿ ನಮ್ಮ ಹೋಲಿಕೆಗೆ ಸರಿಯಾಗಿ ಮನುಷ್ಯನನ್ನು ಮಾಡೋಣ : ....... ಎಲ್ಲಾ ........ ಮೇಲೆಯೂ ದೊರೆತನ ಮಾಡಲು ಅಂದನು".**

**ವಾಕ್ಯ – 31** – **"ದೇವರು ತಾನು ಮಾಡಿದ್ದನ್ನೆಲ್ಲಾ ನೋಡಲಾಗಿ ಇಗೋ, ಅದು ಬಹಳ ಒಳ್ಳೆಯದಾಗಿತ್ತು. ಹೀಗೆ ಸಾಯಂಕಾಲವೂ ಪ್ರಾತಃಕಾಲವೂ ಆಗಿ ಆರನೆಯ"**

ಹೌದು ! ಆದಾಮನು ಮತ್ತು ನಂತರ ಹವ್ವಳು ಆರನೆಯ "ಸೃಷ್ಟಿಯ ದಿನದೊಳಗೆ" ಸೃಷ್ಟಿಮಾಡಲ್ಪಟ್ಟರು. ನಮಗೆಲ್ಲರಿಗೂ ಆಶ್ಚರ್ಯವಾಗಿ ರುವುದೇನೆಂದರೆ ಪಾಪಪ್ರವೇಶಿಸುವುದಕ್ಕೆ ಮೊದಲು ಆದಾಮ ಮತ್ತು ಹವ್ವಳು

ಎಷ್ಟು ಕಾಲ ಅಥವಾ ಎಷ್ಟು ವರ್ಷ ಏದೆನ್ ತೋಟದಲ್ಲಿದ್ದರು??

**ಅದಕ್ಕೆ ಉತ್ತರವನ್ನು ಇಲ್ಲಿ ನೋಡಬಹುದು !!**

ಹೌದು ! ಇಲ್ಲಿ ನಿಖರವಾಗಿ ಆ ಬೀಳುವಿಕೆ ಯಾವಾಗ ಆಯಿತೆಂಬ ಉತ್ತರವನ್ನು ನೋಡಬಹುದು !!


ಆದಾಮನನ್ನು ಸೃಷ್ಟಿಸಿ ಎರಡು ವರ್ಷಗಳ ನಂತರ ಆ ಬೀಳುವಿಕೆ ಆಯಿತು ಮತ್ತು ಸೈತಾನನ ಕೆಟ್ಟತನದ ಆಳ್ವಿಕೆ ಆರಂಭವಾಯಿತು !



ಆದ್ದರಿಂದ ಅವರು ಪಾಪ ಮಾಡಿ ಏದೆನ್ ತೋಟದಿಂದ ಹೊರಗೆ ಕಳುಹಿಸಿದ ದಿನದಿಂದ (ಆದಿಕಾಂಡ 3 : 23)

**6000 ವರ್ಷಗಳ ಕೆಟ್ಟತನದ ಅನುಭವವು ಆರಂಭವಾಯಿತು !!**

**ಆದ್ದರಿಂದ ಆ ವ್ಯತ್ಯಾಸದ ಎರಡು ವರ್ಷಗಳು ಆದಾಮ ಮತ್ತು ಹವ್ವಳು ಪಾಪವಿಲ್ಲದೆ ಏದೆನ್ ತೋಟದಲ್ಲಿದ್ದ - ಕಾಲಗಳು !!!**


7000 ವರ್ಷಗಳು
6000 ವರ್ಷಗಳ ಕೆಟ್ಟದ್ದರ ಅನುಮತಿ
("ಆರು ಇಕ್ಕಟ್ಟುಗಳು" - ಯೋಬನು 5:19)
1000
1000
1000
1000
1000
1000
1000
ಕ್ರಿ.ಪೂ.
ಕ್ರಿ.ಶ.
1000 ವರ್ಷದ ಆಳ್ವಿಕೆ
("ಹೌದು, ಏಳರಲ್ಲಿಯೂ" - ಯೋಬನು 5:19)
4126
1874
( 6000 - 4126
= 1874 )
ಆದಾಮನ ಬೀಳುವಿಕೆಯಿಂದ ಕ್ರಿ.ಶ. 1 ರ
ವರೆಗಿನ ಕಾಲಾವಧಿ.
ಕ್ರಿ.ಪೂ.
4128
ಕ್ರಿ.ಪೂ.
4126
ಕ್ರಿ.ಶ.
1874
ಕ್ರಿ.ಶ.
2874

ನಿಜವಾಗಿಯೂ ! ಎಂತಹ ಮಹಾ ಸತ್ಯ !

ಆದ್ದರಿಂದ ಸತ್ಯವೇದ ಕಾಲಗಣನೆಯ 4128 ವರ್ಷಗಳಲ್ಲಿ ಎರಡು ವರ್ಷಗಳನ್ನು ಕಳೆದರೆ, ಆದಾಮನ ಬೀಳುವಿಕೆಯಿಂದ ಕ್ರಿ.ಶ. 1 ರ ವರೆಗೆ ನಮಗೆ 4126 ವರ್ಷಗಳು ಸಿಗುತ್ತದೆ.

ಇದು ಸ್ಪಷ್ಟವಾದಮೇಲೆ – ನಾವು ಈ 6000 ವರ್ಷಗಳ ಮುಕ್ತಾಯವನ್ನು, ಲೆಕ್ಕಮಾಡಿದರೆ ನಮಗೆ ದೊರೆಯುವುದೇನೆಂದರೆ –

**6000 - 4126 → 1874 ಕ್ರಿ.ಶ.**

ಹೌದು! ನಿಜವಾಗಿಯೂ ಕರ್ತನು "ಆರು ಇಕ್ಕಟ್ಟಿನ" ಕಾಲಗಳು ಮುಗಿದ ನಂತರ ಬರುತ್ತಾನೆ!!

**ನಮ್ಮ ಕರ್ತನ ಎರಡನೆ ಬರುವಿಕೆಯ ದಿನಾಂಕವು ಇನ್ನೊಂದು ಸಾರಿ ದೃಡವಾಗುತ್ತದೆ !**

ಆದ್ದರಿಂದ ದೇವರು ವಿಶ್ರಮಿಸಿದ **"ಏಳನೆಯ ದಿನ"** ಯಾವುದೆಂದರೆ –

| | | | | |
|---|---|---|---|---|
| **ಕ್ರಿ.ಪೂ. 4126** | **TO** | **ಕ್ರಿ.ಶ. 2874** | **=** | **7000 ವರ್ಷಗಳು** |
| **(ಬೀಳುವಿಕೆಯ ವರ್ಷ)** | (+) | **( ಕ್ರಿಸ್ತನ ಸಾವಿರ ವರ್ಷ ಆಳ್ವಿಕೆಯ ಮುಕ್ತಾಯ )** | | |

"ಏಳನೆಯ ದಿನ" ದ ಸೃಷ್ಟಿಯು 7000 ವರ್ಷಗಳಿಗೆ ಸಮಾನವಾಗಿರುವದರಿಂದ ನಾವು ಊಹಿಸಿಕೊಳ್ಳುವದೇನೆಂದರೆ "ಆರನೆಯ ದಿವಸ"ವು ಸಹ ಅದೇ ಕಾಲಾವಧಿಯಾಗಿರಬೇಕು. ಆದ್ದರಿಂದ ನಾವು ನೋಡುವದೇನೆಂದರೆ –

**ಆದಾಮನ ಸೃಷ್ಟಿಯಾದ ವರ್ಷ → 6998**
**......ಮತ್ತು ಹವ್ವಳು ಸೃಷ್ಟಿಯಾದದ್ದು → 6999**
} **"ಆರನೆಯ ದಿನ"**

(ಹವ್ವಳು ಒಂದು ವರ್ಷದ ನಂತರ ಸೃಷ್ಟಿಯಾಗಿರಬಹುದು ಎಂಬುದು ನಮ್ಮ ಸಲಹೆ !)

# 1874ನ ಇನ್ನು ಕೆಲವು ಆಧಾರ ವಾಕ್ಯಗಳು.

ಈಗ ನಾವು ಇನ್ನೂ ಬೇರೆ ಕೆಲವು ವಾಕ್ಯಗಳ ಮೂಲಕ ಕರ್ತನ ಎರಡನೆ ಬರುವಿಕೆಯ ಸುವರ್ಣ ದಿನಾಂಕವನ್ನು (Golden Date) ದೃಡಪಡಿಸಿಕೊಳ್ಳೋಣ.

ಈಗ ನಾವು ಕೆಳಗಿನ ವಾಕ್ಯದಿಂದ ಆರಂಭಿಸೋಣ –

**ಯೆಹೆಜ್ಕೇಲನು 21 : 25 - 27**

**"ದೇವರಾದ ಕರ್ತನು ಹೀಗೆ ಹೇಳುತ್ತಾನೆ ಮುಂಡಾಸವನ್ನು ಎತ್ತಿಡು, ಕಿರೀಟವನ್ನು ತೆಗೆದುಹಾಕು; ................ ನಾನು ತಳ್ಳಿಬಿಡುವೆನು, ತಳ್ಳಿಬಿಡುವೆನು, ಅದನ್ನು ತಳ್ಳಿಬಿಡುವೆನು; ನ್ಯಾಯ ಯಾರದು ಅವನು ಬರುವವರೆಗೂ ಇದು ಇರುವುದಿಲ್ಲ .........."**

ಅಗೋ ! **"ಆತನು ಬರುವ"** ದನ್ನು ಕುರಿತು ಇನ್ನೊಂದು ವಾಕ್ಯವು ತೋರಿಸುತ್ತದೆ!

ಹೌದು ! ಇದು ರಾಜನಾದ ಯೇಸುವಿನ ಎರಡನೆಯ ಬರುವಿಕೆಯ ಸ್ಪಷ್ಟವಾದ ಸೂಚನೆಯಾಗಿದೆ – **"ಬಾಧ್ಯನು"** ತನ್ನ ನಿತ್ಯರಾಜ್ಯವನ್ನು ಈ ಭೂಮಿಯಲ್ಲಿ ಸ್ಥಾಪಿಸುವನು.

**ಆದರೆ ಆತನು ಯಾವಾಗ ಬರುತ್ತಾನೆ?**

ಈ ವಾಕ್ಯವನ್ನು ಗಮನಿಸಿರಿ – **"ತಳ್ಳಿಬಿಡುವೆನು, ತಳ್ಳಿಬಿಡುವೆನು, ತಳ್ಳಿಬಿಡುವೆನು..."** – ಮೂರು ಸಾರಿ ತಳ್ಳಿಬಿಡುವೆನು !!

**ಇದು ಏನನ್ನು ಸೂಚಿಸುತ್ತದೆ?**

ಇದು ಯೆಹೂದ್ಯದ ಅರಸನಾದ ಚಿದ್ಕೀಯನ ಬೀಳುವಿಕೆಯ ನಂತರದ ಕಾಲಾವಧಿಯನ್ನು ಸೂಚಿಸುತ್ತದೆ.

ಕೆಲವರ ಅನಿಸಿಕೆ ಏನೆಂದರೆ ಅನ್ಯ ಜನರ ಚಕ್ರಾಧಿಪತಿಗಳು ಒಬ್ಬರ ನಂತರ ಮತ್ತೊಬ್ಬರು "ತಳ್ಳಿಬಿಡು"ವದನ್ನು ಸೂಚಿಸುತ್ತದೆ ಎನ್ನುತ್ತಾರೆ.

**ಬಾಬೆಲ್ - ಮೇದೋ - ಪರ್ಶಿಯಾ - ಗ್ರೀಸ್ ಮತ್ತು ರೋಮ್**

**"ಬಾದ್ಯನು ಬರುವವರೆಗೆ".**

ಅದು ಮೂರು ತಳ್ಳಿಬಿಡುವೆನು ಅಲ್ಲ, ಆದರೆ ನಾಲ್ಕು ತಳ್ಳಿಬಿಡುವೆನು ಎಂದು ಇರಬೇಕಿತ್ತು.

ಹಾಗಾದರೆ ಈ ವಾಕ್ಯದ ನಿಜವಾದ ಅರ್ಥವೇನು?

ಇದು ಸುಲಭ! ಇದು "**ಬಾಧ್ಯನು ಬರುವವರೆಗೆ**" ಇರುವ ಮೂರು "**ದಿನಗಳ**" ತಳ್ಳಿಬಿಡುವಿಕೆಯನ್ನು ಸೂಚಿಸುತ್ತದೆ.

ಹಾಗಾದರೆ ಈ "ದಿನಗಳು" ಎಂದರೇನು?

ಇದು ಮತ್ತೆ ಸತ್ಯವೇದದ ಸಾಕ್ಷಿಗಳನ್ನು ಸೂಚಿಸುತ್ತದೆ ಎಂದು ಕೆಳಗೆ ಓದುತ್ತೇವೆ.

**2 ಪೇತ್ರನು 3 : 8**

**"ಪ್ರಿಯರೇ, ಕರ್ತನ ಎಣಿಕೆಯಲ್ಲಿ ಒಂದು ದಿನವು ಸಾವಿರ ವರುಷಗಳಂತೆಯೂ ಸಾವಿರ ವರುಷಗಳು ಒಂದು ದಿನದಂತೆಯೂ ಅದೆ ...."**

ಆದ್ದರಿಂದ ಈ ಸತತವಾದ ತಳ್ಳಿಬಿಡುವ "**ದಿನಗಳು**" ಎಂದರೆ ಅದು 1000 ವರ್ಷಗಳ ಕಾಲಾವಧಿಯಾಗಿದೆ.

ಈಗ ಈ ವಿಷಯವನ್ನು ಕುರಿತು ಸ್ಪಷ್ಟವಾಗಿ ಅರ್ಥಮಾಡಿಕೊಳ್ಳೋಣ.

ರಾಜನಾದ ಚಿದ್ಕೀಯನ ಬೀಳುವಿಕೆಯ ವರ್ಷ → **ಕ್ರಿ.ಪೂ. 606**

ಆದಾಮನ ಬೀಳುವಿಕೆಯ ವರ್ಷ → **ಕ್ರಿ. ಪೂ. 4126**

ಆದಾಮನ ಬೀಳುವಿಕೆಯಿಂದ ರಾಜನಾದ ಚಿದ್ಕೀಯನ ಬೀಳುವಿಕೆವರೆಗೆ ಎಷ್ಟು ವರ್ಷಗಳಾಗಿವೆ?

ಇದಕ್ಕೆ ಉತ್ತರವನ್ನು ಕೆಳಗಿನ ಲೆಕ್ಕಾಚಾರದ ಮೂಲಕ ನೋಡುತ್ತೇವೆ –

**4126 - 606 → 3520 ವರ್ಷಗಳು**

ಹೌದು ! ಆದಾಮನ ಬೀಳುವಿಕೆಯಿಂದ 3520 ವರ್ಷಗಳಾಗಿವೆ !

ಈಗ ಅಲ್ಲಿಂದ ಈ ಪ್ರವಾದನೆಯಾದ – "**ತಳ್ಳಿಬಿಡುವೆನು, ತಳ್ಳಿಬಿಡುವೆನು, ತಳ್ಳಿಬಿಡುವೆನು** ......" ಎಂಬುದು ಆರಂಭವಾಗುತ್ತದೆ.

ಹೌದು ! ಈ ಪ್ರವಾದನೆ ವಾಕ್ಯಗಳ ಅರ್ಥವೇನೆಂದರೆ –

→ - **"ತಳ್ಳಿಬಿಡುವೆನು" - 3520 - 4000**

→ - **"ತಳ್ಳಿಬಿಡುವೆನು" - 4001 - 5000**

➡ - **"ತಳ್ಳಿಬಿಡುವೆನು"** **5001 - 6000**

ಹೌದು ! ಮೂರು **"ತಳ್ಳಿಬಿಡುವೆನು"** ಎಂಬ ಪ್ರವಾದನೆಯ ಅಂತ್ಯವು ಆದಾಮನ ಬೀಳುವಿಕೆಯಿಂದ 6000 ವರ್ಷಗಳ ನಂತರ ನೆರವೇರುತ್ತದೆ.

ಇದು ಪ್ರವಾದನೆಯ ಪ್ರಕಾರ ➡ **"ಬಾಧ್ಯನು ಬರುವವರೆಗೆ"** ನೆರವೇರಬೇಕಾಗುತ್ತದೆ.

**ಅದು ಯಾವ ದಿನಾಂಕವನ್ನು ಸೂಚಿಸುತ್ತದೆ ?**

**6000 - 4126 ➡ ಕ್ರಿ.ಶ. 1874**

**ಹೌದು ! ಎರಡನೆ ಬರುವಿಕೆಯ ದಿನಾಂಕಕ್ಕೆ ಇನ್ನೊಂದು ದೃಢಪಡಿಸುವಿಕೆಯಾಗಿದೆ.**

➡ ಈಗ ಮತ್ತೊಂದು ದೃಢಪಡಿಸುವಿಕೆಗಾಗಿ ಬೇರೊಂದು ವಾಕ್ಯದಲ್ಲಿ ನೋಡುತ್ತೇವೆ –

**ಮತ್ತಾಯ 25 : 6**

"..... ಮಧ್ಯರಾತ್ರಿಯಲ್ಲಿ - ಇಗೋ, ಮದಲಿಂಗನು ಬರುತ್ತಾನೆ; (ಪ್ರತ್ಯಕ್ಷನಾಗಿದ್ದಾನೆ) ಆತನನ್ನು ಎದುರುಗೊಳ್ಳುವದಕ್ಕಾಗಿ ಹೊರಡಿರಿ ಎಂಬ ಕೂಗಾಯಿತು".

ಹೌದು ! ರಾಜನಾದ ಯೇಸುವಿನ ಎರಡನೆ ಬರುವಿಕೆಯ ಪ್ರವಾದನೆಗೆ ಇನ್ನೊಂದು ದಿನಾಂಕವಾಗಿದೆ –

☞ ಸಭೆವರ್ಗದ **"ಮದಲಿಂಗನು"** !!

ಇಲ್ಲಿ ನಾವು ಓದುವದೇನೆಂದರೆ ಮದಲಿಂಗನು **"ಮಧ್ಯರಾತ್ರಿಯಲ್ಲಿ"** ಪ್ರತ್ಯಕ್ಷನಾದನೆಂದು ಕೂಗಾಯಿತು –

☞ " ಇಗೋ ಮದಲಿಂಗನು .........." **(NIV)**

ಇಲ್ಲಿ **"ಮಧ್ಯರಾತ್ರಿಯಲ್ಲಿ"** ಎಂದರೆ ಏನನ್ನು ಸೂಚಿಸುತ್ತದೆ?

ಮಧ್ಯರಾತ್ರಿಯೆಂದರೆ ಒಂದು ದಿವಸ ಮುಗಿದು ಹೊಸ ದಿವಸ ಆರಂಭವಾಗುವ ಸಮಯವಾಗಿದೆ !

ಹೊಸ ವರ್ಷದ ಯಾವ ಸಮಯದಲ್ಲಿ ಒಬ್ಬ ವ್ಯಕ್ತಿಯು ಶುಭಕೋರುವವರು ಎಂದು ನೆನಪಿಸಿಕೊಳ್ಳಿರಿ ?

ಹೌದು ! .......... ಅದು ಮಧ್ಯರಾತ್ರಿಯಲ್ಲಿ !!

ಈಗ ಇಲ್ಲಿ ಯಾವ ದಿನವನ್ನು ಸೂಚಿಸಲಾಗಿದೆ?

ಏಕೆ? ಇದು ಮದಲಿಂಗನ ದಿನವಾಗಿದೆ !

ಇದು ಆತನ ಆರಂಭದ "ದಿನ"ವಾಗಿದೆ –

ಅಂದರೆ ಅದು ಆತನು ಎರಡನೆಯ ಸಾರಿ ಬಂದ ಸಮಯವಾಗಿದೆ !!

ಇದು ಸ್ಪಷ್ಟವಾಗಿ ಆದಾಮನ ಬೀಳುವಿಕೆಯಿಂದ (ಯೋಬನು 5 : 19) **"ಏಳನೆಯ"** ಒಂದು ಸಾವಿರ ವರ್ಷದ ದಿನವಾಗಿದೆ.

ಮತ್ತು ಅದು **"ಮಧ್ಯರಾತ್ರಿ"**ಯಾಗಿದ್ದು **"ಆರನೆಯ"** ಸಾವಿರ ದಿನದ ಮುಕ್ತಾಯವಾಗಿದ್ದು ಮತ್ತು

..... **"ಏಳನೆಯ"** ಸಾವಿರ ದಿನದ ಆರಂಭದ ದಿನವಾಗಿದೆ –

ಈ ಸಮಯದಲ್ಲಿ **"ಮದಲಿಂಗನ"** ಎರಡನೆ ಬರುವಿಕೆಯು ಜರಗುತ್ತದೆ !!

ಮತ್ತು ಆದಾಮನ ಬೀಳುವಿಕೆಯಿಂದ ಈ 6000 ವರ್ಷಗಳು ಯಾವಾಗ?

ಇದೊಂದು ಸುಲಭವಾದ ಲೆಕ್ಕಾಚಾರವಾಗಿದೆ –

**6000 - 4126 → ಕ್ರಿ.ಶ.1874.**

ಹೌದು ! 1874ನೇ ವರ್ಷವು ಕರ್ತನ **"ಆರನೆಯ"** ಮತ್ತು **"ಏಳನೆಯ"** ದಿನದ **"ಮಧ್ಯರಾತ್ರಿ"** ಕಾಲವಾಗಿದೆ –

ಇದು ಕರ್ತನ ಲೆಕ್ಕಾಚಾರವಾದ

"ಕರ್ತನ ಎಣಿಕೆಯಲ್ಲಿ ಒಂದು ದಿನವು ಸಾವಿರ ವರುಷಗಳಂತೆಯೂ ಅವೆ".

**ಹೌದು ! ಇಲ್ಲಿ ಕರ್ತನ ಎರಡನೆ ಬರುವಿಕೆಯ ದಿನಾಂಕವಾದ 1874 ಎಂಬುದಕ್ಕೆ ಇನ್ನೊಂದು ಸತ್ಯವೇದ ವಾಕ್ಯದ ದೃಢೀಕರಣವಾಗಿದೆ.**

ಈಗ ಎಲ್ಲಾ ಕೋಣಗಳಿಂದ ಈ ದಿನಾಂಕದ ಲೆಕ್ಕಾಚಾರ ಮತ್ತು ಸತ್ಯವೇದ

ವಾಕ್ಯಗಳ ಹೊಂದಿಕೆಯಾಗುವಿಕೆ ಮತ್ತು ಒಂದಕ್ಕೊಂದು ಸರಿಹೊಂದುವದು ಕೇವಲ ಸರಿಬೀಳುವದು ಮಾತ್ರವಲ್ಲ. ಆದರೆ ಅದು –

ತಕ್ಕ ಕಾಲದಲ್ಲಿ ದೇವರ ವಾಕ್ಯವು **"ದೀಪ"** ವೆಂಬ

**"ಸತ್ಯದ ಬೆಳಕಿನಿಂದ"** ಹೊಳೆಯುವದಕ್ಕೆ ಸ್ಪಷ್ಟವಾದ ಸಾಕ್ಷಿಯಾಗಿದೆ !!

ಮತ್ತು ಕೊನೆಯದಾಗಿ ನಾವು ಆತನ ಎರಡನೆ ಬರುವಿಕೆಯ **"ವಿಧಾನ"**ವು ಆತನ ಸ್ವಂತ ವಾಕ್ಯದ ಪ್ರಕಾರ ಹೇಗೆ ಪರಿಪೂರ್ಣವಾಗುತ್ತದೆ ಮತ್ತು ಆತನ ಎರಡನೆಯ ಬರುವಿಕೆಯ ಸಂಬಂಧಿಸಿದ ಬೇರೆ ವಾಕ್ಯಗಳು ಹೇಗೆ ಸರಿಹೊಂದುತ್ತದೆ ಎಂದು ನೋಡೋಣ !!

ಈಗ ಕೆಳಗಿನ ವಾಕ್ಯವನ್ನು ಸಹ ನೋಡೋಣ –

**ಲೂಕ 17 : 20, 21**

**"ಇದಲ್ಲದೆ - ಇಗೋ, ಇಲ್ಲಿದೆ ! ಇಲ್ಲವೆ ಅಗೋ, ಅಲ್ಲಿದೆ ಎಂದು ಅವರು ಹೇಳುವದಕ್ಕಾಗುವುದಿಲ್ಲ; ಯಾಕೆಂದರೆ ಇಗೋ, ದೇವರ ರಾಜ್ಯವು ನಿಮ್ಮೊಳಗೆ (ಎನ್.ಐ.ವಿ. - "ನಿಮ್ಮ ಮಧ್ಯದಲ್ಲಿ) ಇದೆ ಅಂದನು".**

ಈ ಪ್ರವಾದನೆಯು ಎಷ್ಟು ನಿಜವಾಗಿದೆ !

ಯಾಕೆಂದರೆ ಯಾರು ಸಹ **"ಇಗೋ ಇಲ್ಲಿ ಅಥವಾ ಅಗೋ ಅಲ್ಲಿ"** ಎಂದು ಹೇಳಲಾಗುವದಿಲ್ಲ !

1874 ಮುಂಚೆಯಾಗಲಿ ಅಥವಾ ಅದರ ನಂತರವೇ ಆಗಲಿ !!

ಬರುವ ರಾಜ್ಯವನ್ನಾಗಲಿ ಅಥವಾ ಕರ್ತನ ಬರುವಿಕೆಯಾಗಲಿ ಯಾರೂ ಸಹ ಗ್ರಹಿಸುವದಕ್ಕೆ ಆಗುವದಿಲ್ಲ.

ಏಕೆಂದರೆ ಲೋಕದ ಸಾಧಾರಣ ಸ್ವಾಭಾವಿಕ ಕಣ್ಣುಗಳಿಂದ ಗಮನಿಸುವುದಕ್ಕೆ ಸಾಧ್ಯವಿಲ್ಲ !!

ಹೌದು ! **"ಆತನ ಬರುವಿಕೆಯನ್ನು"** ಗ್ರಹಿಸಿ ನೋಡುವದಕ್ಕೆ ಸಾಧ್ಯವಿಲ್ಲ ಆದರೆ **"ತಿಳುವಳಿಕೆಯ ಕಣ್ಣು"** ಮತ್ತು **"ನಿಶ್ಚಯವಾದ ಪ್ರವಾದನ ವಾಕ್ಯದಿಂದ"** ಮಾತ್ರ ಗ್ರಹಿಸಲು ಸಾಧ್ಯ

**ದೇವರ ವಾಕ್ಯ – ದೀಪದಿಂದ ಬರುವ ಬೆಳಕು !**

**ಹಾಗಿರುವಾಗ ನಮಗೆ ಹೇಗೆ ತಿಳಿಯುತ್ತದೆ?**

ಏಕೆಂದರೆ ಕರ್ತನ "**ಸಹೋದರ / ಸಹೋದರಿ**"ಯಾಗಿರುವ ಭಾಗ್ಯದಿಂದಾಗಿದೆ ಎಂದು ಕೆಳಗಿನ ವಾಕ್ಯದಲ್ಲಿ ಸ್ಪಷ್ಟವಾಗಿ ಓದುತ್ತೇವೆ

1 **ಥೆಸಲೋನಿಕ** 5 : 4 - **"ಆದಿನವು ಕಳ್ಳನಂತೆ ನಿನ್ನ ಮೇಲೆ ಬರತಕ್ಕದ್ದಲ್ಲ"**.

ಮತ್ತೆ ಇನ್ನೊಂದು ವಾಕ್ಯದಲ್ಲಿ ನಾವು ಹೀಗೆ ಓದುತ್ತೇವೆ –


**ಅಪೋಸ್ತಲರ ಕೃತ್ಯಗಳು 1 : 11**

**"......ನಿಮ್ಮಿಂದ ಪರಲೋಕಕ್ಕೆ ಎತ್ತಲ್ಪಟ್ಟ ಈ ಯೇಸುವು ಯಾವ ರೀತಿಯಿಂದ ಪರಲೋಕದೊಳಗೆ ಹೋಗಿರುವದನ್ನು ನೀವು ಕಂಡಿರೋ ಅದೇ ರೀತಿಯಲ್ಲಿ ಬರುವನು......"**

ಹೌದು ! ಇದೂ ಸಹ ಎರಡನೆ ಬರುವಿಕೆಯಲ್ಲಿ ನೆರವೇರಿತು !

**"ಅದೇ ರೀತಿಯಲ್ಲಿ" ಎಂದರೆ ಏನು ಮತ್ತು ಹೇಗೆ?**

**ಇದು ಕರ್ತನು ಶರೀರ ಸ್ವಭಾವದಲ್ಲಿ ತನ್ನ ಶಿಶ್ಯರಿಗೆ ತನ್ನನ್ನೇ ವ್ಯಕ್ತ ಪಡಿಸಿಕೊಂಡದ್ದನ್ನು ಸೂಚಿಸುತ್ತದೆಯೇ?**



**"ಅದೇ ರೀತಿಯಲ್ಲಿ" ಎಂದರೆ ಕರ್ತನ ಎರಡನೆಯ ಬರುವಿಕೆಯು ಸಹ ಕಣ್ಣಿಗೆ ಕಾಣುವ ಹಾಗೆ ಶರೀರಧಾರಿಯಾಗಿ ಬರುವನೆಂದು ಅರ್ಥವೆ?**

**ಇಲ್ಲ ! ಇಲ್ಲಿ ಹೇಳಿರುವದಕ್ಕೆ ಅದು ಅರ್ಥವಲ್ಲ !**

ಇಲ್ಲಿ ಸೂಚಿಸಿರುವದರ ನಿಜಾಂಶ ಏನೆಂದರೆ –

➡ ಆತನ ಅಪೋಸ್ತಲರು ಮತ್ತು ಶಿಶ್ಯರು ಮಾತ್ರ ಆತನು ಪರಲೋಕಕ್ಕೆ ಏರಿ ಹೋದದ್ದನ್ನು ಕಂಡರೆಂದು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

**ಅಪೋಸ್ತಲರ ಕೃತ್ಯಗಳು** 1 : 9,10 - **"ಅವರು ನೋಡುತ್ತಿರುವಾಗ ಆತನು ಮೇಲಕ್ಕೆ ಎತ್ತಲ್ಪಟ್ಟನು; ಮೋಡವು ಅವರ ದೃಷ್ಟಿಗೆ ಮರೆಮಾಡಿ............ಆತನು ಮೇಲಕ್ಕೆ ಹೋಗುತ್ತಿರಲು ಅವರು ಆಕಾಶದ ಕಡೆಗೆ ದೃಷ್ಟಿಸಿ ನೋಡುತ್ತಿರುವಾಗ...."**

➡ ಇದು ಏನನ್ನು ಸೂಚಿಸುವದೆಂದರೆ ಆತನ ಎರಡನೆ ಬರುವಿಕೆಯಲ್ಲಿ - ಆತನ "ಸಹೋದರ, ಸಹೋದರಿಯರು" ಮಾತ್ರ ಅಂದರೆ

ಕರ್ತನ ಶಿಶ್ಯರು ತಮ್ಮ **"ತಿಳುವಳಿಕೆಯ ಕಣ್ಣುಗಳಿಂದ"** ಆತನನ್ನು **"ನೋಡುವರು"**....... ಮತ್ತು ಕರ್ತನ ಕಣ್ಣಿಗೆ ಕಾಣದಿರುವ ಹಿಂದಿರುಗುವಿಕೆಯನ್ನು ನೋಡುವರು, ಆದರೆ ಲೋಕದವರು ಯಾರೂ ಅದನ್ನು ತಿಳಿಯುವದಿಲ್ಲ !

**ಹೌದು ! 1874 ರಲ್ಲಿ ಕರ್ತನ ಎರಡನೆ ಬರುವಿಕೆಯು ಶಬ್ಧವಿಲ್ಲದೆ ಮತ್ತು ಯಾರಿಗೂ ತಿಳಿಯದೆ ಹೇಗೆ ದೇವರ ರಾಜ್ಯವು ಆರಂಭವಾಯಿತೋ, ಹಾಗೆಯೇ ಅದು ಬೇಗನೆ ಎಲ್ಲರಿಗೂ ಭೂಮಿಯಲ್ಲಿ ಕಣ್ಣಿಗೆ ಕಾಣುವ ಹಾಗೆ ವ್ಯಕ್ತವಾಗುತ್ತದೆ ಮತ್ತು ಇಸ್ರಾಯೇಲಿನಲ್ಲಿ ಸ್ಥಾಪಿಸಲ್ಪಡುತ್ತದೆ!**

ಹೌದು ! ಆದ್ದರಿಂದ ನಾವು ಕಲಿತಿರುವದೇನೆಂದರೆ, ದೇವರ ರಾಜ್ಯವು

➡ 1874 ರಲ್ಲಿ **"ಕಣ್ಣಿಗೆ ಕಾಣದ"** ಹಂತದಲ್ಲಿ ಆರಂಭವಾಯಿತು.........

➡ ಮತ್ತು **"ಕಣ್ಣಿಗೆ ಕಾಣುವಂತಹ"** ಹಂತವು ಇಸ್ರಾಯೇಲಿನಲ್ಲಿ ಬಹು ಬೇಗನೆ ಆರಂಭವಾಗುತ್ತದೆ !

ಈ ಎರಡನೆ ಬರುವಿಕೆಯ ದಿನಾಂಕದ ಕಾಲಗಣನೆಯ ಅಧ್ಯಯನವನ್ನು ಮುಗಿಸಿದ ನಾವು ಈಗ ಮುಕ್ತಾಯವಾಗಿ ಒಂದು ವಿಶೇಷವಾದ ವಾಕ್ಯವನ್ನು ಕುರಿತು ನೋಡೋಣ –

**ಮಾರ್ಕನು 13 : 35**

**"ಅದ್ದರಿಂದ ಜಾಗರೂಕರಾಗಿರಿ ಯಾಕೆಂದರೆ ಮನೇ ಯಜಮಾನನು ಸಂಜೆಯಲ್ಲಿಯೋ ಸರಿಹೊತ್ತಿನಲ್ಲಿಯೋ ಇಲ್ಲವೆ ಹುಂಜ ಕೂಗುವಾಗಲೋ ಇಲ್ಲವೆ ಮುಂಜಾನೆಯಲ್ಲಿಯೋ ಯಾವಾಗ ಬರುತ್ತಾರೋ ನಿಮಗೆ ಗೊತ್ತಿಲ್ಲ"** .

**ಈ ವಾಕ್ಯದ ಅರ್ಥವೇನು?**

ಇದು ಕರ್ತನ ಎರಡನೆ ರಹಸ್ಯವಾದ ಬರುವಿಕೆಯ ವಿಧಾನವನ್ನು ಸೂಚಿಸುತ್ತದೆ. ಇದರಿಂದ ಆತನ ಎರಡನೇ ಬರುವಿಕೆಯು ನಾಲ್ಕು ಹಂತಗಳಲ್ಲಿರುತ್ತದೆ ಎಂದು ಸ್ಪಷ್ಟವಾಗಿ ಓದುತ್ತೇವೆ !!

ಈಗ ನಾವು ಈ ನಾಲ್ಕು ಹಂತಗಳ ಅರ್ಥಗಳನ್ನು ನೋಡೋಣ –

## 1. "......ಸಂಜೆಯಲ್ಲಿಯೋ......"

ಇಲ್ಲಿ **"ಸಂಜೆ"** ಎಂದರೆ **"ಮಧ್ಯರಾತ್ರಿ"**ಗೆ ಮುಂಚೆಯ ಸಮಯವನ್ನು ಸೂಚಿಸುತ್ತದೆ. ಆದ್ದರಿಂದ ಇದು ಆತನ ಎರಡನೆ ಬರುವಿಕೆಯ ಮುಂಚೆ ಇರುವ ಹಂತವನ್ನು ಸೂಚಿಸುತ್ತದೆ.

ಹೌದು ! ಈ ಹಂತವನ್ನು ಮಿಲ್ಲರ್ ಮೂಮೆಂಟ್ (Miller Movement) ಎಂದು ಸೂಚಿಸಲಾಗಿದ್ದು, 1844 ನೇ ವರ್ಷದಲ್ಲಿ ಆತನ (ಕರ್ತನ) **"ಕಣ್ಣಿಗೆ ಕಾಣುವ"** ಎರಡನೆ ಬರುವಿಕೆಯ ನಿರೀಕ್ಷೆಯಲ್ಲಿದ್ದಾಗ,

**".....ಮದಲಿಂಗನು (ಹಿಂತಿರುಗುವಿಕೆಗೆ) ತಡಮಾಡಿದನು"**

ಎಂಬ ವಾಕ್ಯವು ನೆರವೇರಿತು.

## 2. ".......ಸರಿಹೊತ್ತಿನಲ್ಲಿಯೋ......."

ಇದು ಕರ್ತನ **"ಪರೌಸಿಯಾ"** ಅಥವಾ ಪ್ರಸನ್ನತೆಯನ್ನು ಸೂಚಿಸುತ್ತದೆ.

ಆತನು 1874ನೇ ವರ್ಷದಲ್ಲಿ **"ಕಳ್ಳನು ಬರುವಂತೆ"** ಬಂದನು.

ಇದು ದೇವರ ಏಳನೆಯ ಸೃಷ್ಟಿಯ ದಿನದಲ್ಲಿ, ಆರನೆಯ ಸಾವಿರ ವರ್ಷದ ಮುಕ್ತಾಯ ಮತ್ತು ಏಳನೆಯ ಸಾವಿರ ವರ್ಷದ ಆರಂಭದ ಮಧ್ಯದ ಕ್ಷಣವಾಗಿತ್ತು !!

## 3. ".....ಇಲ್ಲವೆ ಹುಂಜ ಕೂಗುವಾಗಲೋ....."

ಇದು ಮುಂಜಾನೆಯ ಮತ್ತು ಸೂರ್ಯೋದಯಕ್ಕೆ ಮೊದಲು ಇರುವ ಕಾಲವನ್ನು ಸೂಚಿಸುತ್ತದೆ ಮತ್ತು ಕರ್ತನ ಎರಡನೆ ಬರುವಿಕೆಯ ಮುಂದಿನ (ನಂತರದ) ಹಂತವನ್ನು ಸೂಚಿಸುತ್ತದೆ.

.....ಎಪಿಫೇನಿಯಾ ಹಂತ

ಈ ಹಂತವು ಕರ್ತನ ಎರಡನೆ ಪ್ರತ್ಯಕ್ಷತೆಯ ದೃಢತೆ ಮತ್ತು ಸ್ಪಷ್ಟತೆಯನ್ನು ದೇವರ ವಾಕ್ಯದಿಂದ "ಪ್ರಕಾಶವಾಗಿ ಹೊಳೆಯುವಂತೆ" ಮಾಡುತ್ತದೆ!!

## 4. "......ಮುಂಜಾನೆಯಲ್ಲಿಯೋ......."

ಇದು "**ನೀತಿಯ ಸೂರ್ಯನು**" (ಮಲಾಕಿಯ 4 : 2) ಉದಯವಾಗುವ ಸಾವಿರ ವರ್ಷದ ಕೊನೆಯ ಹಂತವನ್ನು ಸೂಚಿಸುತ್ತದೆ !

ಹೌದು ! ಈ ಹಂತವನ್ನು –

ಅಪೋಕಲುಪ್ಸಿಸ್ ಅಥವಾ "**ಪ್ರಕಟಿಸಪಡುವಿಕೆ**" ಎಂದು ಕರೆಯಲಾಗುತ್ತದೆ.

ಇದು ಮಹೋನ್ನತ ರಾಜ್ಯದ ಮಹಿಮೆಯುಳ್ಳ ಆಳ್ವಿಕೆಯಲ್ಲಿ ಲೋಕದ ಎಲ್ಲಾ ಮನುಷ್ಯರಿಗೆ ಯೇಸು ಮತ್ತು ಆತನ ಶರೀರವಾಗಿರುವ ಸಭೆಯು ವ್ಯಕ್ತವಾಗುವ ಕೊನೆಯ ಹಂತವಾಗಿದೆ !!

ಆಹ್ ! ಎಷ್ಟೋ ಕಾಲದಿಂದ ರಹಸ್ಯವಾದ ಈ ಎಲ್ಲಾ ವಿಷಯಗಳನ್ನು ಅರಿತಿರುವ ನಾವು ಎಷ್ಟು ಭಾಗ್ಯವಂತರು !!

ಹೌದು ! ಕರ್ತನು ಕೆಳಗಿನ ವಾಕ್ಯವನ್ನು ಹೇಳಿದ್ದರು –

"....... ಮನೇ ಯಜಮಾನನು ಯಾವಾಗ ಬರುತ್ತಾನೋ ನಿಮಗೆ ಗೊತ್ತಿಲ್ಲ...."

**......ಈ ದಿನ ಆತನ ಹೇರಳವಾದ ಕೃಪೆಯಿಂದ ನಮಗೆ ಗೊತ್ತಿದೆ !!**
**ಆಮೆನ್!**



ಕೊನೆಯದಾಗಿ, ಇಂತಹ ಅತಿ ದೊಡ್ಡ ವಿಷಯ ಹೇಗೆ ನಮಗೆ ತಿಳಿದುಬಂದಿದೆ ಮತ್ತು ಪ್ರಕಟವಾಗಿದೆ ಎಂದು ನೀವು ಆಶ್ಚರ್ಯಪಡುತ್ತಿರಬಹುದು, ಇದಕ್ಕೆ ಉತ್ತರವನ್ನು ತಿಳಿಯಲು ನಮಗೆ ಪರಿಚಿತವಾದ ಛಾಯೆಯು ಸತ್ಯವೇದದಲ್ಲಿ ಇರುವುದನ್ನು ನೋಡೋಣ !

ಈಗ ನಾವು ಕೆಳಗಿನ ವಾಕ್ಯವನ್ನು ಓದೋನ –

**ಆದಿಕಾಂಡ 24 : 63 -65**

**"ಇಸಾಕನು ಸಾಯಂಕಾಲ ಹೊಲದಲ್ಲಿ ಧ್ಯಾನಮಾಡುವುದಕ್ಕೆ ಹೋದಾಗ .... ರೆಬೆಕ್ಕಳು ತನ್ನ ಕಣ್ಣುಗಳನ್ನೆತ್ತಿ ಇಸಾಕನನ್ನು ನೋಡಿದಾಗ .......... ಆಕೆಯು ಆ ಸೇವಕನಿಗೆ - ಹೊಲದಲ್ಲಿ ನಮಗೆ ಎದುರಾಗಿ ಬರುವ ಆ ಮನುಷ್ಯನು ಯಾರು ಅಂದಳು? ಅದಕ್ಕೆ ಆ ಸೇವಕನು -ಅವನೇ ನನ್ನ ಯಜಮಾನನು ಅಂದಾಗ ....."**

ಹೌದು ! ಆದಿಕಾಂಡ 24ನೇ ಅಧ್ಯಾಯದ ಈ ಮೇಲಿನ ವಾಕ್ಯದಲ್ಲಿ ಮತ್ತು ಛಾಯೆಯಲ್ಲಿ ನಾವು ನೋಡುವದೇನೆಂದರೆ –

**"ರೆಬಕ್ಕಳು"** ➡ ಯೇಸುವಿನ "ಮದಲಗಿತ್ತಿ" ಗೆ ಛಾಯೆಯಾಗಿದೆ – ಸಭೆ

**"ಎಲೀಯೆಜರನು"** ➡ ದೇವರ ಪವಿತ್ರಾತ್ಮಕ್ಕೆ ಛಾಯೆಯಾಗಿದೆ.

**"ಇಸಾಕನು"** ➡ ಕರ್ತನಾದ ಯೇಸುಕ್ರಿಸ್ತನಿಗೆ ಛಾಯೆಯಾಗಿದೆ.

**"ಹೊಲ"** ➡ ಲೋಕವನ್ನು ಸೂಚಿಸುತ್ತದೆ (ಮತ್ತಾಯ 13:38)

ಆದ್ದರಿಂದ ಇದು ಹೇಗೆ ಸಭೆಯು (ರೆಬಕ್ಕಳು ಮಾತ್ರ ಮತ್ತು ಆಕೆಯೊಂದಿಗೆ ಇರುವ ಕನ್ಯೆಯರಲ್ಲ)

ಮೊದಮೊದಲು ಕರ್ತನನ್ನು ಮತ್ತು ಆತನ ಎರಡನೇ ಬರುವಿಕೆಯ ವಿಧಾನವನ್ನು ಗುರುತಿಸುವರು !!

## ಅದನ್ನು ಆಕೆ ಹೇಗೆ ಮಾಡುತ್ತಾಳೆ ?

ಈ ವಿಷಯವನ್ನು ವಿವರಿಸುವ ಸೇವಕನಾದ ಎಲೀಯೆಜರನನ್ನು ಕೇಳಿ, ಕರ್ತನ ಹಿಂದಿರುಗುವಿಕೆಯ ಪ್ರತ್ಯಕ್ಷತೆಯ ಬಗ್ಗೆ ಗುರುತು ಹಿಡಿಯುತ್ತಾಳೆ !!

## ➡ ಇದು ಏನನ್ನು ಸೂಚಿಸುತ್ತದೆ ?

ಇದು ಹೇಗೆ ಸಭೆಯ ವರ್ಗದವರು ("**ರೆಬಕ್ಕಳು**") ಪವಿತ್ರಾತ್ಮನ ("**ಎಲೀಯೆಜರನು**") ಮೂಲಕ ಈ ಲೋಕಕ್ಕೆ ("**ಹೊಲ**") ಹಿಂದಿರುಗಿದ ಕರ್ತನು ("**ಇಸಾಕನು**")

ಬಗ್ಗೆ ತಿಳುವಳಿಕೆಯನ್ನು ಹೊಂದುವರೆಂದು ಸೂಚಿಸುತ್ತದೆ.

ಏಕೆಂದರೆ ಪವಿತ್ರಾತ್ಮನ ಬಗ್ಗೆ ನಾವು ಹೀಗೆ ಓದುತ್ತೇವೆ –

**ಯೋಹಾನ** 16:13 – "..... ಆತನು ನಿಮ್ಮನ್ನು ಎಲ್ಲಾ ಸತ್ಯಕ್ಕೆ ನಡಿಸುವನು; ಮುಂದೆ ಬರುವುದಕ್ಕಿರುವ ವಿಷಯಗಳನ್ನು ಆತನು ನಿಮಗೆ ತೋರಿಸುವನು".


ಹೌದು ! ನಿಜವಾಗಿಯೂ ಪ್ರಕಟನೆ ಪುಸ್ತಕದ ಕೊನೆಯಲ್ಲಿ ಅಪೋಸ್ತಲನಾದ ಯೋಹಾನನು ಹೇಳಿದ ಹಾಗೆ ನಾವೆಲ್ಲರು ಹೇಳೋಣ –

**ರಾಜನಾದ ಯೇಸುವಿಗೆ ಸ್ವಾಗತ (ಪ್ರಕಟನೆ 19 : 16)**

**ಮತ್ತು....**

**ನಮ್ಮ ಪ್ರೀತಿಯ ಮದಲಿಂಗನಿಗೆ ಸ್ವಾಗತ (ಮತ್ತಾಯ 25 : 6)**






For Private Circulation Only

NOT FOR SALE


**Jesus Loves** *Ministry*

For free indepth Bible study contact

Br.Raju 8867768876

# 1, BETHESDA, 1st floor, Janani Enclave, 1st cross,
Thiglarapalya Andrahalli Main Rd, B'lore 560058

Email : rajudawn@yahoo.com

YouTube SUBSCRIBE TO OUR CHANNEL


Available Languages : Kannada, English, Hindi, Tamil and Telugu